# ಸುರಭಿ

## ಡಾ. ಸಾ.ಶಿ.ಮರುಳಯ್ಯ

## ಗೀತಾಗಂಗಾಧರ

ಜಯ ಜಯ ಜಯ ಜಯ ಜಯ ಗಂಗಾಧರ
ಜಯ ಜಯ ಜಯಹೇ ಜಯ ಕರುಣಾಕರ ॥

ಜನ ಜಂಗುಳಿ ಜೋಗುಳವನೆ ಲಾಲಿಸಿ
ಜಗತವತರಿಸಿದೆ ಶಿಸುವೆಂದೆನಿಸಿ
ಜಗದ ಗುರುವೆ ಓ ಓಂಕಾರಾತ್ಮನೆ
ಜಂಗಮ ಜ್ಯೋತಿಯೆ ಲಿಂಗ ಸ್ವರೂಪನೆ ॥೧॥

ಪದ ಸೋಂಕಿ ಸೌಭಾಗ್ಯವ ಪಡೆದು
ಮಾಹಾಂತರ ಮಠ ಪುಳಕವ ತಳೆದು
ನಿನ್ನಯ ಸವಿನುಡಿ ಶ್ರೋತದಿ ನನೆದು
ಪಾವನವೆನಿಸಿತೊ ಪುಣ್ಯದ ಪುಂಜದ ॥೨॥

ಶ್ರೀಮದ್ ರಂಭಾಪುರ ಪೀಠದಲಿ
ವೀರಸಿಂಹಾಸನಾಧೀಶನು ಎನಿಸಿ
ವೀರಶೈವ ಪತಾಕೆಯ ತೆಗೆಸಿ
ವಿಶ್ವದ ಶಿರದಲಿ ನೆಲೆಗೊಳಿಸದನೆ॥೩॥

ಕನ್ನಡ ನಾಡಿನ ಪುಣದಯ ತಾಣದಿ
ಚಿನ್ಮಯ ಚೆನತ ಚೆಲುವೆಂದೆನಿಸಿ
ಭಾವುಕ ಭಕ್ತರ ಬೇಡಿಕೆ ಸಲಿಸಿ
ಮುಕ್ತಿಮಂದಿರವಾ ದ್ವಾರದ ತೆರೆದನೆ ॥೪॥

ರುದ್ರಮುನಿವರ್ಯಗೆ ಭದ್ರಾಸನವಿತ್ತು
ಶುದ್ಧ ವಿರಾಗಿಯೆ ಆದೆಯೊ ನೀನ್
ಪರಮ ಪುರಷನೆ ತೇಜೋಮೂರ್ತಿಯೆ
ವೀರಶೈವವನು ಬೆಳಗಿದನೆ ॥೫॥

## ಜಯವೀರ ರುದ್ರಮಿನಿ ದೇಶೀಕೇಂದ್ರ

ಜಯಮಂಗಲಂ
ನಿತ್ಯ ಶುಭಮಂಗಲಂ

ಜಯವೀರ ರುದ್ರಮುನಿ ಗುರು ಶಿವಾಚಾರರ್ಯನಿಗೆ
ಜಯವೀರಶೈವದಾ ಜ್ಯೋತಿರ್ಪೂಣನನಿಗೆ
ಜಯಶುದ್ಧ ಧಾಮನಿಗೆ ಜಯ ಭದ್ರಕಾಮನಿಗೆ
ಜಯ ಜಯಾ ಜಯತು ಜಯ ಜಯವೀರಭದ್ರನಿಗೆ ॥ಜಯಮಂಗಲಂ॥

ರಂಭಾಪುರೀಯಲ್ಲಿ ತುಂಬೆ ಹೂವಾದನಿಗೆ
ಬೆಳುವಲದ ನಾಡಿನಾ ಬಿಲ್ವದಳಗೆ

ಪಚ್ಚ ಕರ್ಪೂರದೊಲು ಸ್ವಚ್ಛನಾದನಿಗೆ
ಇಚ್ಛೆಯನು ಸಲಿಸುವಾ ಭಕ್ತವತ್ಸಲಗೆ ॥ಜಯಮಂಗಲಂ॥

ವೀರಸಿಂಹಾಸನದ ಧೀರ ಗಂಭೀರನಿಗೆ
ವೀರಭದ್ರ ಧ್ವಜದ ಎತ್ತಿ ಹಿಡಿದನಿಗೆ
ದಂದ ದಿವ್ಯಾಕುಂಡ ಕಾಮಂಡಲವ ಹಿಡಿದು
ಭೂಮಂಡಲದ ಸುತ್ತಿದಾ ಪುಂಡರೀಕನಿಗೆ ॥ಜಯಮಂಗಲಂ॥

ತಾವರೆಯ ಕೆರೆಯಲ್ಲಿ ತೇರಾಗಿ ನಡೆದವಗೆ
ಎಡೆಯೂರ ಜಡೆಮುಡಿಗೆ ಹೂವು ಆದವಗೆ
ವಾಣಾಸಿಯಲಂದು ವಿಶ್ವೆನೆನಿಸಿದಗೆ
ವಿಶ್ವಾತ್ಮನೀ ನಮ್ಮ ರುದ್ರಮುನಿ ಮುಖ್ಯನಿಗೆ ॥ಜಯಮಂಗಲಂ॥

ಸಕಲ ಸದ್ಯೋಜಾತ ಸಕಲಾರ್ಚಿತಾ ಪೂತ
ಅಕಲಂಕ ಗುರುವರಗೆ ಸಕಲ ಗುರುಗೆ
ವಿದ್ಯಾಸಮುದ್ರನಿಗೆ ಜ್ಞಾನಸುಧೆ ಸಾಗರಗೆ
ಭದ್ರಮಂಗಲ ರೂಪಿ ರುದ್ರಮುನಿದೇಶಿಕಗೆ ॥ಜಯಮಂಗಲಂ॥

## ಬನ್ನಿ ಓ ಗೆಳತಿಯರೇ !

ಬನ್ನಿ ಓ ಗೆಳತಿಯರೆ ಆಡೋಣ ಬನ್ನಿ
ನಿತ್ಯ ಸತ್ಯನ ಹಾಡಿ ಮೆರೆಸೋಣ ಬನ್ನಿ ॥

ವೀಣೆಯಿಂಚರದಂತೆ ಕಣಿಯಾಗಿ ಬನ್ನಿ
ಕಿಂಕಿಣಿಯ ಝಣ ಝಣಕೆ ಕಣವಾಗಿ ಬನ್ನಿ
ಬೆಗಳಿನೊಲು ಬೆಳಬೆಳಗಿ ಹೊಳೆ ಹರಿದು ಬನ್ನಿ
ಚೆಲುಮೆಯೊಲು ಪುಟಿಪುಟಿದು ನರ್ತಿಸುವ ಬನ್ನಿ ॥

ವೀರಶೈವದ ಜ್ಯೋತಿ ವೀರಶೈವದ ಬೆಳಸು
ಪಂಚ ಶಾಖೆಗಳಾಗಿ ಪಲ್ಲವಿಸಿತಂದು
ವೀರಭದ್ರನು ನಂದಿ ವೃಷಭ ಭೃಂಗಿ ಸ್ಕಂದ
ಪಂಚ ಲಾಂಛನ ಹಿಡಿದು ಸಂಚರಿಸಿತೆಮದು ॥

ಜಗದ ಗುರು ರೇಣುಕರು ಜಗದಾದಿ ಚೇತನರು
ಲಿಂಗಾಂಗ ಸಮರಸದ ಜ್ಯೋತಿ ಬಳಗಿ
ಷಟ್‌ಸ್ಥಲ ಶಿವಾಚರ ಅಷ್ಟದಾವ್ಣಘಳ
ಬಿತ್ತರಿಸುತೆತ್ತಿದರು ವಈರಶೈವವನೆಂದು ॥

ಮಂಗಳ ಸುಧಾಕರರು ಶ್ರೀ ಶಿವಾನಂದ ಗುರು
ಬ್ರಹ್ಮತೇಜಸ್ವಿಗಳು ವರ್ಚಸಿವಯಂದು
ಧರ್ಮಕ್ಕೆ ಧ್ವಜವಿತ್ತು ಅದರ ದೀಧಿತಿ ಮೆರೆದು
ಜಗವ ಜಾಗೃತಗೈದ ವರ ಮಹಿಮರೆಂದು ॥

ವೀರ ಗಂಗಾಧರನು ವಜ್ರ ರಜತೇಜಸಮ

ಮನುಕುಲಕೆ ಮಾರ್ಗವನು ತೋರಿದವರನು
ಅನುದಿನವು ಮಾನವನ ಧರ್ಮಕ್ಕೆ ಜಯವೆಮದು
ಸಾರಿ ಸತ್ಯಾತ್ಮನಲಿ ನಿತ್ಯನಾದನು ಎಂದು ॥

ಆದಿಗುರು ರೇಣುಕರ ದಿವ್ಯಮಾನಸ ಪುತ್ರ
ವರ ರುದ್ರಮುನಿಯೆ ಇಂದವತರಿಸಿ ಬಂದು
ವೀರ ಸಿಂಹಾಸನದ ದೇವನಾದನು ಎಮದು
ಶ್ರೀ ರುದ್ರಮುನಿವರಗೆ ನಿತ್ಯ ಮಂಗಲವೆಂದು ॥

ಮಂಗಳವಾಗಲಿ ಮಹಿಮೋನ್ನತರಿಗೆ

ಮಂಗಲವಗಲಿ ಮನೋನ್ನತರಿಗೆ
ಮಂಗಳವಾಗಲಿ ಗುರುಗಳಿಗೆ ॥ಪ॥

ಪರಶಿವ ತೇಜದ ಸಕಾರರಿಗೆ
ಪಂಚಾಚಾರ್ಯರೆಂದಾದರಿಗೆ ॥ಅನಂ.ಪ॥

ಸದ್ಯೋಜಾತ ಮುಖೋದ್ಭವ ಮೂರ್ತಿಗೆ
ಆದಿ ಜಗದುಗರು ರೇಣುಕಗೆ
ವೀರಪೀಠದ ಸಂಸ್ಥಾಪಕನಿಗೆ
ಬಾಳೆಹಳ್ಳಿಯಲಿ ನೆಲೆಸಿದಗೆ ॥೧॥

ದೀನದಯಾಗುಣ ದಾರುಕ ದೇವಗೆ
ವಾನದೇವದಿಂದುಸಿದಗೆ
ಉಜ್ಜಯಿನಿಯ ವರ ಮರುಳಾರಾಧ್ಯಗೆ
ಸದ್ಧರ್ಮವನದ ಸಾರಿದಗೆ ॥೨॥

ಶ್ರೀ ಶೈಲೋನ್ನತ ಪೀಮಡಿತಾರಾಧ್ಯಗೆ
ಸೂರ್ಯ ಸಿಂಹಾಸನದಧಿಪತಿಗೆ
ಸುಧಾಕುಂಡದಲಿ ಸೊದೆ ತುಂಬಿದಗೆ
ಮಲ್ಲಿಕಾರ್ಜುನನೊಳು ಬೆರೆದನಿಗೆ ॥೩॥

ತತ್ಪುರುಷಾತ್ಮಕ ವಿಶ್ವಾರಾಧ್ಯಗೆ
ಜ್ಞಾನಜ್ಯೋತಿಯನು ಬೆಳಗಿದಗೆ
ವಾರಣಾಸಿಯಲಿ ನೆಲೆನಿಂತನಿಗೆ
ವಿಶ್ವೇಶ್ವರನೇ ಆದನಿಗೆ ॥೪॥

ಕೇದಾರದಗಿರಿ ವೈರಾಗ್ಯದ ಸಿರಿ
ಈಶಾನೋದ್ಭವ ದೇವನಿಗೆ
ಏಕೋರಾಮಗೆ ವಿಶ್ವಾರಾಮಗೆ
ಬೆಳ್ಳಿಯ ಬೆಟ್ಟದ ಒಡೆಯನಿಗೆ ॥೫॥

## ಗುರುವಂದನ

ನಮೋ ನಮೋ ಶ್ರಿ ಪರಮ ಜದ್ಗುರು ರೇಣುಕ ಗುರುವರನೆ
ನಮೋ ನಮೋ ಜಗವಂದಿತ ಪೂಜಿತ ಮಂಗಳ ಶುಭಕರನೆ ॥ಪ॥

ಪರಶಿವಸದ್ಯೋಜಾತ ಮುಖೋದ್ಬವ ಚಿನ್ಮಯ ಚಿದ್ಘನನೆ
ಧರೆಗವತರಿಸಿದ ಶಕ್ತಿ ವಿರಕ್ತಿಯೆ ಜಗದೋದ್ದಾರಕನೆ
ಪರತರ ತೇಜದ ಪರಮೋದಾರನೆ ಭಾಸುರ ಭಸ್ಮೋದ್ದೀಪತನೆ
ಕೋಟಿ ಕೋಟಿ ಶತ ಸೂರ್ಯ ಪ್ರಭೆಯಲಿ ವಿಶ್ವವ ಬೆಳಗಿದರೆ ॥೧॥

ಕೊಲ್ಲೀಪಾಕಿಯ ಶಿವಲಿಂಗದೊಳು ಜನಿಯಿಸಿ ಬಂದನವೆ
ಎಲ್ಲೆಡೆಯಲ್ಲೂ ಶಿವಪಂಚಾಕ್ಷರಿ ಮಂತ್ರವ ಬಿತ್ತಿದನೆ
ರೇಣುಕ ದೇಶಿಕ ಪರಿವ್ರಾಜಕನೆ ಪರಮ ತಪೋನಿಧಿ ಪಾವನನೆ
ವೀರಶೈವ ಮತ ಸಂಸ್ಥಾಪಕನೆ ವಿಶ್ವಧರ್ಮವದ ಸಾರಿದನೆ ॥೨॥

ದಲಿತ ಮುನೀಶ್ವರ ಅಗಸ್ತ್ಯನಿಗೆ ಷಟ್‌ಸ್ಥಲ ತತ್ವವ ತಿಳಿಸಿದರೆ
ಶತಾನಂದ ಸತ್ಯಂಧ್ರ ಭದ್ರರನು ಉದ್ಧರಿಸಿದ ಶ್ರೀ ಸದ್ಗುರುವೆ
ಬಾಳೇಹಳ್ಳಿಯ ಶ್ರೀ ಕ್ಷೇತ್ರದಲಿ ಕವಳಯ ಪೆಂಪಿನ ಕೈದೋಟದಲಿ
ಪಂಚಪೀಠದೊಳಗೊಂದತಿ ಶ್ರೇಷ್ಠದ ವೀರಪೀಠವನು ನಿಲಿಸಿದರೆ ॥೩॥

ಲಂಕೆಯ ನಾಯಕ ವೀರವಿಭೀಷಣನಿಚ್ಛೆಯ ಸಲಿಸಿದರೆ
ಶಿಂಶುಮಾರ ವರ ಡಿಂಡಿಮಾರರಿಗೆ ದಾಸೋಹತ್ವದ ತೋರಿದನೆ
ಬ್ರಜಶೀಲೆ ಸಂತ ಧರ್ಮಗುಪ್ತರಿಗೆ ಶಿವಸೇನೆಯ ಸಿರಿಕೊಟ್ಟವನೆ
ಸತಿ ದಮಯಂತಿ ಮಣಿ ಭದ್ರನಿಗೆ ಕಾಯಕ ದೀಕ್ಷೆಯನಿತ್ತವನೆ ॥೪॥

ಕಾವಿಕಮಮಡಲು ದಂಡವ ಹಿಡಿದು ಮಂಡಲ ತಿರುಗಿದನೆ
ದಿವ ಘನ ರುದ್ರನ ಬುವಿಗೈತರಿಸುತೆ ಸಾಮರಸ್ಯವನು ತಿಳಿಸಿದರೆ
ವೀರಶೈವದಾ ತತ್ವವ ಬೋಧಿಸಿ ಶಿವಪಾರಮ್ಯವ ಸಾರಿದನೆ
ಶಿವಾದ್ವೈತವನು ದಯೆಗೈದವನೇ ಧರ್ಮೋದ್ಧಾರಕನೆ ॥೫॥

## ಜಯ ಜಯ ರೇಣುಕ

ಬನ್ನಿ ಬನ್ನಿರಿ ಏಳಿ ವಿಶ್ವ ಚೈತನ್ಯಗಳೆ
ವಿಶ್ವಾತ್ಮ ರೇಣುಕಗೆ ಜಯವೆನ್ನಿರೇಳಿ ॥

ಪ್ರಥ್ವಿ ಆಸ್ರಮ ನೀಡು, ಆಗಸದೆ ರಕ್ಷೆ ಇರು
ವಾಯು ಘೋಷಿಸು, ರುದ್ರ ನೀನು ಶಿವವಾಗು
ಆದಿತ್ಯ ಜ್ಯೋತಿ ಕೊಡು, ಉಷೆ ನೀಡು ಸೌಂದರ್ಯ
ಮಿತ್ರ ಮೈತ್ರಿಯ ತಾರೊ ಪೂಷನನೆ ಪೋಷಿಸೊ

ದೇವಿ, ಶಂಕರಿ, ಶಿವೆ ಪಾರ್ವತೀ, ಪರಮೇಶ್ವರೀ
ಸವ್ ಶುಭಕರೆ ಮಾತೆ ಮಾತಂಗಿ ಮಂಗಲೇ
ಬನಶಂಕರೀ ಭದ್ರೆ ರಣಭಯಂಕರಿ ರುದ್ರೆ

ನಿಮ್ಮ ಶಕ್ತಿಗಳೆಲ್ಲ ಸಕಾರಗೊಳಲಿ
ಶ್ರೀಮತು ಶ್ರಿಗುರು ಜಗದೇಕ ಸದ್ಗುರು
ಮಹಮಹಿಮ ಶ್ರಿ ಗುರು ಶ್ರಿ ರೇಣುಕ ಗುರು

ಜಯಮಕ್ಕೆ ಶುಭಮಕ್ಕೆ ಜಯತು ಜಯಶಂಕರನೇ
ಜಯರಾಜ್ಞಿ ರಾಜೇಶ್ವರೀ
ಜಯ ಜಯ ಜಯ ಜಯ ರೇಣುಕ
ಜಯ ಜಯ ಜಯ ಜಯ ದಾರುಕ

ಜಯ ಜಯ ರೇಣುಕ
ಜಯ ಜಯ ಗುರುವರ
ಜಯ ಜಯ ರೇಣುಕ
ಜಯ ಜಯ ಗುರುವರ

ಜಯ ಜಯ ರೇಣುಕ ಜಯ ಜಯ ರೇಣುಕ
ರೇಣುಕ ರೇಣುಕ ರೇಣುಕ ರೇಣುಕ

## ಆರದಿರು ಹಣತೆ

ಆರದಿರು ಆರದಿರು ಆರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ ॥ಪ॥

ಈಶಾನ ತತ್ಪುರುಷ ಪರಮ ಸದ್ಯೋಜಾತ
ವಾಮದೇವಾಘೋರ ಪಂಚಮುಖದಿಂದೆ
ಜನಿಯಿಸಿದ ಜಗದಾದಿ ಚಿಜ್ಯೋತಿ ಚೇತನವೆ
ಪ್ರಜ್ವಲಿಸು, ಪ್ರಸ್ಫುರಿಸು ದಿವ್ಯ ದೀಧಿತಿಯಾಗು ।೧॥

ಅಕ್ಕ ಮಯಕ್ತಾಯಿಯರು ಬಸವೇಶ ಸಕಲೇಶ
ಪ್ರಭುದೇವ ಸೊನ್ನಲಿಗೆ ಸಿದ್ಧರಾಮ
ಚೆನ್ನಬಸವಾದಗಳು ಶರಣ ಶರಣೆಯರೆರೆದ
ಕರುಣೆಯೊಲವಿನ ತೈಲ ತುಂಬಿರುವ ಹಣತೆ ॥೨॥

ಎಡೆಯೂರ ಜಡೆಮುಡಿಯ ವರಿಸಿದ್ಧಲಿಮಗಯತಿ
ಬೋಳ ಬಸವಾದಿಗಳು ನೂರೊಮದು ಅಮರ ಗಣ
ಅನವರತ ಪೋಷಿಸಿದ ಪುನ್ಯಪುಂಜದ ಬೆಳಸೆ
ದಿಟವಾಗು, ಸ್ಫುಟವಾಗು ತಿರೆಯ ತೇಜವ ಆಗು ॥೩॥

ಆರದಿರು ವಿಶ್ವದ ವೀರಶೈವದ ಕೆಚ್ಚೆ
ಆರದಿರು ಜನಮನದ ಸ್ವಾತಂತ್ರ್ಯ ದಿಚ್ಚೆ
ಆರದಿರು ಲಿಂಗಾಂಗಿ ಸತ್ಸಂಗ ತೇಜವ
ಆರದಿರು ಆತ್ಮರತ ಪರತರದ ಜ್ಯೋತಿಯೇ ॥೪॥

ಆರದಿರು ಆರದಿರು ಆರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ

ಕೀರ್ತಿಸುವೆ

ಕೀರ್ತಿಸುವೆ ನಾಂ ಪ್ರಾರ್ಥಿಸುವೆ॥
ನಿತ್ಯ ಜಗದ್ಗುರು ಪಂಚಾಚಾರ್ಯರ ॥ಕೀರ್ತಿ॥

ವೀರಶೈವ ಮತ ಸಂಸ್ಥಾಪಕರ
ಭೂರಿಕೃಪಾರಸ ಪೂರಿತರ ।
ಧೀರರ, ಷಡುಸ್ಥಲ ಕಾರಣ ಭೂತರ
ಕರ್ಣಾನಂದ ಪವಿತ್ರ ಚರಿತ್ರರ ॥೧॥

ಮಂಗಲ ಮಹಿಮ ಶಿವನಂದಾರ್ಯನ
ಜಂಗಮ ಸಂಕಲು ಸಾರ್ವಭೌಮೇಂದ್ರನ
ಜ್ಞಾನ ನಿಧಿಯ, ಮಹಯೋಗಿ ಸಮಾರ್ಚಿತ
ಜ್ಞಾನಿ ಜವಾವಲಿ ಕೀರ್ತಿತೆ ಚರಿತನ ॥೨॥

ಲಿಂಗಜಂಗಮ ಸಮಾಹಿತ ಮಹಿಮನ
ಗಂಗಾಧರ ಗುರು ದೇಶಿಕೇಂದ್ರನ
ಮಾನವ ಧರ್ಮಕ್ಕೆ ಜಯವಾಗಲಿ ಎಂದ
ಮಂಗಲಮೂರ್ತಿ ಚಿಲ್ಲಿಂಗ ಸ್ವರೂಪನ ॥೩॥

ಅಂಗಲಿಂಗಗಳ ತತ್ತ್ವ ಬೋಧಿಸಿ
ಪಿಂಗದೆ ಭುವನ ಸ್ತುತನಾದ
ಮಂಗಲಕರ ಶ್ರೀ ರುದ್ರಮುನೀಂದ್ರನ
ಯೋಗಿ ಪ್ರದರ್ಶನ ಕಾರಣ ಪುರುಷನ

ಮಂಗಲಂ ಗುರುವರ್ಯಾಃ

ಪಂಚಾಸ್ಯ ಪಂಚಾಚಾರ್ಯಾಃ
ಮಂಗಲಂ ಕುರುತ ಗುರುವರ್ಯಾಃ ॥ಪಂಚಾಸ್ಯ॥

ಬ್ರಹ್ಮಾಂಡ ಭುವನಾಚಾರ್ಯಾಃ
ಪಿಂಡಾಂಡ ಶೋಧನಕಾರ್ಯಾಃ
ಪಾಖಂಡ ಖಂಡನಧೈರ್ಯಾಃ
ಪಾಂಡಿತ್ಯ ಮಂಡಿತವೀರ್ಯಾಃ ॥ಪಂಚಾಸ್ಯ॥

ಧೃತವೇದ ವೇದ್ಯ ಲೀಂಗಾಃ
ಕೃತ ಭದ್ರಪಾಪ ಭಂಗಾಃ
ಹೃತ ಪಂಚಬಾಣ ಸಂಗಾಃ
ವೃತ ಶಿಷ್ಯ ರತ್ನ ಸಂಘಾಹ ॥ಪಂಚಾಸ್ಯ॥

ಕಾಲಾದಿ ತತ್ತ್ವ ಹರಣಾಃ
ಫಾಲಾತ್ತದಾಹ ಕಿರಣಾಃ
ಮಲಭಾರ ಬಾಧಿತ ಕರಣಾಃ
ಫಲಕಾಮಿ ಶಂಕರ ಕರುಣಾಃ ॥ಪಂಚಾಸ್ಯ॥

ಪಾಲಯ ಮಾಂ

ಜ್ಞಾನಾನಂದ ಸುರಾನತ ನಿರುಪಮ
ರೇಣುಕ ಗುರುವರ ಪಾಲಯ ಮಾಂ ।\ಪ॥

ದೀನಾನಾನತ ಭೂನುತ ಸುಖಕರ
ರೇಣುಕ ಗುರುವ ಪಾಲಯ ಮಾಂ ॥ಅ.ಪ॥

ಭಿಕ್ಷಾಪೇಕ್ಷ ಚಿತಾಕ್ಷ ಪರಮ
ರುದ್ರಾಕ್ಷ ವಿಭೂಷಿತ ಕಂಧರ
ದೀಕ್ಷ ಶಿಕ್ಷ ಶಿವ ಮೋಕ್ಷಗ್ರೇಸರ
ರೇಣುಕ ಗುರುವರ ಪಾಲಯ ಮಾಂ ॥೧॥

ಭಾಸುರ ಸಾಸಲುವಾಸ ಸುರೇಶ
ಶ್ರೀಷ ನುತಾಂಘ್ರಿ ಶಲಾಕಯಾ
ಅಶಪಾಶ ಕ್ಲೇಶವಿನಾಶಕ
ರೇಣುಕ ಗುರುವರ ಪಾಲಯ ಮಾಂ ॥೨॥

## ಸುತ್ತೂರ ಸಿರಿ

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ
ಪುಣ್ಯಸ್ಮರಣೆಗಾಗಿ
ಈ ರಚನೆ ಮೀಸಲು
– ಸಾ. ಶಿ. ಮರುಳಯ್ಯ

## ಬೆಳಗು ಬೆಳಗಲಿ ಬಂದು ಕೂಡಿದಂತೆ

ಶಿವರಾತ್ರಿ ಗುರುವರನ ಕರಕಮಲ ಸಂಜಾತ
ಕರುಣೆಯೊಲವಿನ ಮೂರ್ತಿ ರಾಜೇಂದ್ರನೆ
ಕಿರಣದರುಣಚ್ಛಾಯೆಯೊಳು ಬೆರೆದ ಕಾಂತಿಯೆನೆ
ಜಗಕಿತ್ತ ಚಿಜ್ಯೋತಿ ತೇಜವನ್ನೆ !

ಮಂತ್ರಿ ದೇಹಿಯು ಆತ, ತಂತ್ರ ಸಿದ್ಧಿಯು ನೀನು
ಪ್ರಣವ ಪಂಚಾಕ್ಷರಿಯೆ ಆದನವನು
ತತ್ವರಸದಾ ಮೇಘದೊಡಲಾಗಿ ಕುಳಿತನವ
ನೀನಾದ ಸ್ವಾತಿಮಳೆ ಸುರಿಸಿದವನು !

ಓಂಕಾರದಾಕಾರ ಅವನ ಬಾಗಿದ ದೇಹ
ಕಣ್ಣು ಕಾಂತಿಯಲಿತ್ತು ಮಂತ್ರ ಪಠನ
ಲೋಕ ಕಲ್ಯಾಣಕ್ಕೆ ಸಮೆದ ಶ್ರಿಗಂಧವದು
ಕರ್ಪುರಾರತಿಯಾಯ್ತು ನಿನ್ನ ವದನ !

ಸಮರಸವು ಲಿಂಗಾಂಗ ನಿಮ್ಮಿವರಾ ಸಮಗ
ಬೆಳಗು ಬೆಳಗಲಿ ಬಂದು ಕೂಡಿದಂತೆ
ಭಾವ ನಾದಾತೀತ ನಿಬ್ಬರಗು ನಿಜದಿರವು
ನಿಲವು ಒಂದೇ ಆಯ್ತು ಶೂನ್ಯದಂತೆ !

## ಮಡಿಯಾಗಿ ಬಾಳಿದಿರಿ

ಕಾಯವುಳ್ಳಾತನಲಿ ಕಾಯಕವು ಇರಬೇಕು

ಇರಬೇಕು ದೇವನಲಿ ನೇಮನಿಷ್ಠೆ
ಶ್ರದ್ಧೆ ಸಿದ್ಧಿಗೆ ಮೂಲ ಶುದ್ಧಾತ್ಮನಾದವಗೆ
ಎಂಬುದೇ ಶಿವಮಂತ್ರ, ಶಿವಪ್ರತಿಷ್ಠೆ !

ನಾಡು ನಲಿಯಲಿ ಬೇಕು, ನಲ್ಮೆ ನೀಡಲಿ ಬೇಕು
ದಾನದಲಿ ದಾಸೋಹಿ ಆಗಬೇಕು
ಹೊಗಳಿಕೆಗೆ ತೆಗಳಿಕೆಗೆ ಹಿಗ್ಗು ಕುಗ್ಗದು ಬೇಡ
ನೇಸರಂದದ ಸಮತವಾದ ಬೇಕು !

ಮೇಳುಕೀಳೆಂದೆಂಬ ಕಳೆಯ ಕೀಳಲು ಬೇಕು
ಜೀವನಲಿ ದೇವನನು ಕಾಣಬೇಕು
ಮೊದಲು ಮಾನವನಾಗಿ ಬದುಕು ಮಾಡಲಿ ಬೇಕು
ಮನುಕುಲವು ಒಂದಾಗಿ ಬೆಳಗ ಬೇಕು !

ಕಾವಿ ಸೇವೆಯ ಚಿಹ್ನೆ, ಪೀಠ ಶರಣಿನ ಕುರುಹು
ನಾನೊಬ್ಬ ಕಿಂಕರನು ಶರಣ ಸಂಬೋಳಿ
ಗುರುವು ನಾನೆಂದೆಂಬ ಹಮ್ಮು ಬಿಮ್ಮದು ಬೇಡ
ನಾನೆಂದೂ ನೊಂದವರ ಎದೆಯ ಕೀಲಿ !

ಎಂದೆಲ್ಲ ನುಡಿಯುತ್ತ, ಅದರಂತೆ ನಡೆಯುತ್ತ
ಮಡಿಯಾಗಿ ಬಾಳಿದಿರಿ ರಾಜೇಂದ್ರ ವಿಭುವೆ
ಶತಕೋಟಿ ಜೀವರಿಗೆ ಬದುಕು ಕೊಟ್ಟಿರಿ ದೇವ
ನಿಮ್ಮ ಕೀರ್ತಿಯ ಬೆಳಸು ನಾವಿಲ್ಲವೆ?

## ನಿನ್ನಲ್ಲಿ ನಾನೊಂದು ಬೆಳಕು ಕಂಡೆ

ನಿನ್ನಲ್ಲಿ ನಾನೊಂದು ಬೆಳಕು ಕಂಡೆ
ಶಿವರಾತ್ರಿ ರಾಜೇಂದ್ರ ಸಕಲ ಗುಣಸಾಂದ್ರ
ನಿನ್ನಲ್ಲಿ ನನ್ನನ್ನೆ ಕಂಡುಕೊಂಡೆ ॥

ಬಸವಣ್ಣನಾ ಭಕ್ತಿ ಅಕ್ಕನ ವಿರಕ್ತಿ
ಚನ್ನಬಸವಣ್ಣನಾ ಜ್ಞಾನದನುರಕ್ತಿ
ಸಿದ್ಧರಾಮನ ಕರ್ಮಯೋಗದಾಸಕ್ತಿ
ಅಲ್ಲಮನ ಅವಿರತದ ಅಧ್ಯಾತ್ಮ ಪ್ರೀತಿ
ಎಲ್ಲ ಒಂದೆಡೆ ಕೂಡಿ ನೀವಾದಿರಾಚಾರ್ಯ
ವಯೋಮೂರುತಿ ನೀವು ರಾಜೇಂದ್ರವರ್ಮ ॥

ರಣ ಸಂದೇಶವನು ಸಂವಹಿಸುವವ ನೀನು
ನೀನೆ ವಚನೋದ್ಯಾನ ! ವಚನ ವಾಖ್ಯಾನ
ಮನುಕುಲದ ಸೇವೆಯೇ ಮಹದೇವ ಪೂಜೆಯದು
ಸವಿನುಡಿಯೆ ಆ ಸದಾಶಿವನೊಲಿಸುವಾ ಮಂತ್ರ
ದೀನ ದಲಿತರ ಸೇವೆ ನಿನ್ನ ನಿತ್ಯದ ನೇಮ
ಅದುವೆ ಜಪತಪ ಧ್ಯಾನ ನಿತ್ಯಾನುಷ್ಠಾನ ॥

ಸಕಲ ಜೀವಾತ್ಮರಿಗೆ ಲೇಸನೆ ಬಯಸುತ್ತ
ಸಕಲ ಚೇನನಗಳಲಿ ಶಿವನ ಅರಸುತ್ತ

ಅವರ ಕೈಂಕರ್ಯದಲಿ ತೃಪ್ತಿ ತಾ ಪಡೆಯುತ್ತ
ದುಡಿಮೆಯಲಿ ದೇವನನು ಕಾಣಿಸುತ್ತ
ಶುಕನಾದೆ ಶಿವಗುರುವೆ ಶಿವರಾತ್ರಿ ರಾಜೇಂದ್ರ
ಶಿವನ ಚೆಂಬೆಳಕಲ್ಲಿ ಶಿವನೆ ನೀನಾದೆ ॥

## ನೀ ಎಲ್ಲಿ ಹೋದೆ

ನಮ್ಮೆಲ್ಲರನು ಬಿಟ್ಟು ನೀ ಎಲ್ಲಿ ಹೋದೆ
ಶಿವರಾತ್ರಿ ರಾಜೇಂದ್ರ ಸಕಲ ಸದ್ಗುಣ ಸಾಂದ್ರ ॥

ಸುತ್ತೂರ ಸುತ್ತಲಿನ ನಿಂತ ಬತ್ತದ ಗದ್ದೆ
ಬಿಕ್ಕಿ ಬಿಕ್ಕಳುತಲಿದೆ ಮತ್ತೆ ಮತ್ತೆ
ಕಪಿಲೆಯಾ ಕಣ್ಣೀರೆ ಹೊಳೆಯಾಗಿ ಹರಿಯುತಿದ
ನನ್ನಪ್ಪನಿಲ್ಲಾದನೇ ಎಂದೆನುತ್ತೆ

ಕರುನಾಡ ಸಿರಿದೇವಿ ಅತ್ತತ್ತು ಸೊರಗಿದಳು
ಅವಳ ಸಂತೈಸಲಿಕೆ ಯಾರಿಗರಿದು
ಕನ್ನಡಿಯು ಕೈತಪ್ಪಿ ಹನ್ನೆರಡು ಚೂರಾಗಿ
ಬಾಳು ಬೇಡಾಗಿಹದು, ಭಗ್ನ, ಬರಿದು

ಮುಗ್ಧ ಮೋಹಕ ವದನ ಸ್ನಿಗ್ಧ ಕರುಣೆಯ ಕಣ್ಣು
ಹೇಗೆ ಮರೆಯಲೊ ನನ್ನ ಮಾತೃಹೃದಯ
ಶತಕೋಟಿ ಶಿಷ್ಯರಾ ಹತಭಾಗ್ಯರಾದರಾ
ಅರ್ಪಿತವು ಕಣ್ಣಿರೆ ಶ್ರದ್ಧಾಂಜಲಿ !

## ಜಯಾ ಜಯಾ ಶಿವರಾತ್ರಿ ರಾಜೇಂದ್ರನೆ

ಜಯ ಜಯಾ ಶಿವರಾತ್ರಿ ರಾಜೇಂದ್ರನೆ
ಜಯ ಜಯಾ ದಿವರಾತ್ರಿ ದುಡಿಯುವವನೆ ॥
ಜಯ ಜಯಾ ಸತ್ಯಶಿವ ನಿತ್ಯ ನಿರ್ಮಲ ಭಾವ
ಜಯ ಜಯಾ ಭಕ್ತಜನ ಕಲ್ಪತರುವೆ ॥

ಮುಗ್ಧ ಮೋಹಕ ವದನ ಸ್ನಿಗ್ಧ ಮೂರುತಿ ನೀನು
ಶ್ರದ್ಧೆಯದು ಸಿದ್ಧಿಗೆ ಮೂಲವೆಂದವ ನೀನು
ಕಾಯಕದಿ ಕೈಲಾಸ ತೋರ್ದವನು ನೀನು
ದಯೆಯಲ್ಲಿ ಧರ್ಮನು ಬಿತ್ತಿದವ ನೀನು

ಸೃಷ್ಟಿ ಸಾಮಷ್ಟಿಯಲಿ ಅನ್ನ ಮೂರ್ತಿಯಕಂಡು ॥
ಸಕಲವೂ ಶಿವನತ್ತ ಕೊಡುಗೆ ಎಂದವ ತಂದೆ
ಅವನು ಕೊಟ್ಟುದನೆಲ್ಲ ಅವನಿಗೇ ಮುಟ್ಟಿಸುತೆ
ಶಿವನ ಪ್ರಸಾದವನು ಶಿವನಿಗರ್ಪಿಸಿದೆ ॥

ರತ್ನಸಿಂಹಾಸನದ ಮಣಿ ಮುಕುಟಧರರಿಂಗೆ
ಯತ್ನ ಸಿದ್ಧಿಯು ಆದೆ ನುನ ಗುರುವಾದೆ

ಜ್ಞಾನಾನ್ನ ದಾಸೋಹವನು ನಿತ್ಯ ನೀ ನಡೆಸಿ
ನಿಚ್ಚ ಪ್ರಸಾದಿಯಲಿ ಐಕ್ಯ ನೀನಾದೆ ॥

ಶಿಕ್ಷಣಾಪೇಕ್ಷಿಗಳು, ಪಕ್ಷಿಗಣ ತಾ ಬರಲು
ವಟವೃಕ್ಷ ನೀನಾದೆ ಶಿವರಾತ್ರಿ ಗುರುವೇ
ದೀನನಿಗೆ ದಯೆಯಾದೆ, ದಲಿತನಿಗೆ ತಾಯಾದೆ
ರಾಷ್ಟ್ರಪಿತ ಸಾಧನೆಯ ಹೊಂದೇರು ಆದೆ !

## ಸುತ್ತೂರು

ಬೆಳ್ಳಿ ಬೆಟ್ಟದ ಬೆಳಕೆ ಹೊಳೆಯಾಗಿ ಹರಿದಿಲ್ಲಿ
ಮಡುಗಟ್ಟಿ ನಿಂದಿಹುದು ತೀರ್ಥವಾಗಿ
ಕಾಮಧೇನುವ ಒಲಿದು ಸೂರೆಬಿಟ್ಟು ಸುರಿದಾಗ
ಹಾಲು ಹೊಳೆಯಾಗಿಹುದು ಕಪಿಲೆಯಾಗಿ

ಗಗನದಲೆ ತೆಂಗುಗಳು ಜಾಗರಮಾಡುವುವು
ಬೆಳುದಿಂಗಳಿರುಕಿನಲಿ ಬೆಳಕ ತೂರಿ
ನೆಲದಲ್ಲಿ ಹೊಂಬಾಳೆ ಹುಡಿತುಂಬಿ ಬರೆದಿಹುದು
ರಂಗವಲ್ಲಿಯನಿಲ್ಲಿ ಬೀಸಿ ಚವರಿ.

ಸುತ್ತೂರ ಸುತ್ತೆಲ್ಲ ಮುತ್ತು ಮಣಿಗಳ ಮಾಲೆ
ಬತ್ತ ಬಂಗಾರಕ್ಕೆ ಕುಣಿ ಇಚ್ಛೆ !
ಕತ್ತೆತ್ತಿ ಕೇಳಿದರೆ ಮುಗಿಲು ಮಾತಾಡುವುದು
ಎತ್ತೆತ್ತಲೂ ಹಚ್ಚ ಹಸಿರು ಪಚ್ಚೆ !

ವೀರಸಿಂಹಾಸನದ ಕರುಣೆ ಕಣ್ತೆರದಂತೆ
ಮಲ್ಲಿಗೆಯು ಚೆಲ್ಲಿಹುದು ಬಯಲಿನಲ್ಲಿ
ಶಿವರಾತ್ರಿ ಗುರುವರನ ತಪವೆ ಹಣ್ಣಾದಂತೆ
ತೃಪ್ತಿ ಮಲಗಿದೆ ಇಲ್ಲಿ ಗದ್ದುಗೆಯಲಿ

ಇದುವೆ ಪುಣ್ಯದ ಪುಂಜ ಅನುಭಾವಿಗಳ ಬೆಳಸು
ಶಿವರಾತ್ರಿ ರಾಜೇಂದ್ರನಿರುವ ನಾಡು
ಅವನ ಕರ ಸಂಜಾತ ತರುಣ ರವಿಶಿವರಾರಿ
ದೇಶಿಕೇಂದ್ರನ ನಿಜದ ನಲುಮೆ ಬೀಡು !

## ಮೂಡಿ ಬಾ !

ಮೂಡಿ ಬಾ ಮುಡಿ ಬಾ ಮೂಡಿ ಬಾ

ಮೂಡಿ ಬಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ
ಮೂಡಿ ಬಾ ॥ಪ॥
ಜಗದೊಡೆಯ ನೀನಾಗಿ
ಜಗದೊಡಲ ಕಣ್ಣಾಗಿ
ಶಿವರಾತ್ರಿ ಶಿವನಾಗಿ ಶುಭ ತುಂಬು ಬಾ ॥ಅ. ಪ॥

ನಿಶೆಯ ಗರ್ಭದೊನೊಗೆವ ಹಸುಳೆ ಶಶಿಯಂತೆ
ಉಷೆಯ ಹಣೆಯಲಿ ಮೆರೆವ ಬಾಲ ರವಿಯಂತೆ
ಚೆಂಬೆಳಗು ಚಿಗುರಾಗಿ ಚೆಲವಾಂತ ತೆರದಿ ಬಾ
ಹೊಂಬೆಳಗು ಹೊಗರಾಗಿ ಶಿರೆ ತುಂಬುವಂತೆ ಬಾ ॥೧॥

ಕಪಿಲೆ ಕಾವೇರಿಯರ ವಿಫುಲ ಸಂಗಮದಂತೆ
ವಿಪಿನ ವೈತರಣಿಯರ ಪುಣ್ಯೈವಂತೆ
ಪತಿತಿ ಪಾವನನೆ ಬಾ, ಪುಣ್ಯ ಪುಂಜವೆ ಬಾರ
ಶಿವರಾತ್ರಿ ರಾಜೇಂದ್ರನಾ ಕಣ್ಣೆ ಬಾರ ॥೨॥

ಸಪ್ತ ಸಾಗರದೆದೆಯ ಸುತ್ತ ಚೇತನದಂತೆ
ಗುಪ್ತಗಾಮಿನಿಯಾಗಿ ಹೋಳೆ ಹರಿದು ಬಾರಾ
ಮನುಕುಲದಿ ಮಾನವತೆ ಬಿತ್ತು ಬಿತ್ತಲು ಬಾರಾ
ಸುತ್ತೂರಿನೈಸಿರಿಯೆ ಸವಿಗನಸೆ ಬಾರ ॥೩॥

ಜಯವು ಶ್ರೀ ಶಿವರಾತ್ರಿ ಸಿದ್ಧ ಶುದ್ಧಾತ್ಮನಿಗೆ
ಜಯವು ಶ್ರೀ ಶಿವರಾತ್ರಿ ರಾಜೇಂದ್ರ ವಿಭುಗೆ
ಜಯವು ಶ್ರೀ ಶಿವರಾತ್ರಿ ದೇಶೀಕೇಂದ್ರ ಪ್ರಭುಗೆ
ಜಯ ಜಯತು ಸುತ್ತೂರ ವೀರಸಿಂಹಾಸನಕೆ ॥೪॥

## ಬೆಳಗು ಬಾ

ಬೆಳಗು ಬಾ ಓ ಬೆಳಕೆ
ಶಿವನ ಕಣ್ಣಿನ ಬೆಳಕೆ
ಶಿವರಾತ್ರಿ ರಾಜೇಂದ್ರ ನೆರೆದ ಚೆಂಬೆಳಕೆ ॥
ಬೆಳಗು ಬಾ
ಬೆಳಗು ಬಾ
ಬೆಳಗು ಬಾ ॥

ಉಷೆಯಾಗಿ ದೆಸೆ ಬೆಳಗಿ
ಹೊಸ ತೇಜದಲಿ ಮೂಡಿ
ವೀರಸಿಂಹಾಸನದಿ ನೆಲೆನಿಂತ ಬೆಳಕೆ ॥
ಬೆಳಗಿನೊಳಗಣ ಬೆಳಕೆ
ಜಗದಾದಿ ಮುಂಬೆಳಕೆ
ಆತ್ಮ ತೇಜದಿ ಹೊಳೆವ ಬೆಳವ ಹೊಂಬೆಳಕೆ ॥
ಬೆಳಗು ಬಾ
ಬೆಳಗು ಬಾ
ಬೆಳಗು ಬಾ ॥

ಪ್ರಭುವು ನೀನಾಗಿದ್ದೆ
ಜಗದ ವಿಭು ನೀನಾದೆ
ಇಂದಾದೆ ವಿಶ್ವಗುರು ದೇಶೀಕೇಂದ್ರ
ಷೋಡಶಕಾಪೂರ್ಣ –
ನಾದ ಓ ಚಂದ್ರಮನೆ

ಸೊದೆ ತುಂಬಿದಾ ಕಡಲೆ ಓ ರುಂದ್ರ ಸಾಂದ್ರ ॥
ಬೆಳಗು ಬಾ
ಬೆಳಗು ಬಾ
ಬೆಳಗು ಬಾ ॥

ಪ್ರಳಯ ತಾಂಡವವುಳಿದು
ಪ್ರಣವದೋಂಕೃತಿಗೈದೆ
ಪರಶಿವನ ಮುಖದಂತೆ ವದನವೆತ್ತವನೆ ॥
ಶಾಂತಮೂರ್ತಿಯೆ ಸದಾ
ಸುಸ್ಮಿತನೆ ಸುರುಚಿರನೆ
ಆನಂದ ರಸಯೋಗಿ ತರುನ ತೇಜಸ್ವಿಯೇ ॥
ಬೆಳಗು ಬಾ
ಬೆಳಗು ಬಾ
ಬೆಳಗು ಬಾ ॥

ಮಘ ಮಘಿಪ ಮಂದಾರದಲರಾಗಿ ಬಾ
ಸೊಗದ ಸೌರಭವೆರೆವ ಎಲರಾಗಿ ಬಾ
ಇಳೆಯಲ್ಲಿ ಹೊಳೆಹರಿವ ತೊರೆಯಾಗಿ ಬಆ
ಹರಿದ ಬಂಜರಿನಲ್ಲಿ ಹರಿರುಣಿಸು ಬಾ ॥

ಬಾರ ಓ ಬಾ ಬಾರ
ಬಾರ ಓ ದೇಶಿಕನೆ
ಸುತ್ತೂರ ಸಿರಿಮುಡಿಯಹೋದೆ ಬಾರಾ ॥

ಧವಳ ಕೀರುತಿಗೆಲ್ಲ
ದಳವಾಗು ಬಾರಾ
ಧರ್ಮ ದೀಧಿತಿಯಾಗಿ ಗುಡಿ ಎತ್ತು ಬಾರಾ ॥

ಮಡಿ ಮನದಿ ಬಾರಾ
ನುಡಿಯಲರ ತಾರಾ
ಬಾರ ಓ ಸದ್ಗುರುವೆ ಜಗದ ಗುರು ತಂದೇ ॥
ಸುತ್ತೂರ ಸಿರಿಯೇ
ಓ ಶಿವರಾರಿ ದೇಶಿಕನೆ
ಬೆಳಗು ಬಾ
ಬೆಳಗು ಬಾ
ಬೆಳಗು ಬಾ ॥

ಜಯವಾಗಲಿ ಸುತ್ತೂರ ಸಿರಿಗೆ

ಜಯವಾಗಲಿ ಜಯವಾಗಲಿ ಶಿವರಾತ್ರೀಶ್ವರಗೆ
ಜಯವಾಗಲಿ ಜಯವಾಗಲಿ ಸುತ್ತೂರಿನ ಸಿರಿಗೆ

ಗತಕಾಲದಿ ತಡಕಾಡಲಿ ಸೌಹಾರ್ದದ ಬೆಳಸಿದಗೆ
ಕಪಿಲಾನದಿ ಮಡಲಿನಲಿ ಪವಾಡವನ್ನು ಮೆರೆದವಗೆ
ಪ್ರಣವ ಪಂಚಾಕ್ಷರಿಯನೆ ಪಠಿಸುತ್ತಲಿ ನಡೆವಗೆ

ಸುತ್ತೂರಿನ ನೆತ್ತಿಯಲ್ಲಿ ಸತ್ತಿಗೆಯನು ನಿಲಿಸಿದಗೆ
॥ ಜಯವಾಗಲಿ ॥

ವೀರಸಿಂಹಾಸನವನು ಸುತ್ತೂರಲಿ ಸದುದವಗೆ
ಧರ್ಮದ್ಯುತಿ ಧರೆ ಬೆಳಗಲು ದಾಸೋಹದೆ ಆದವಗೆ
ನಿತ್ಯ ತಪೋನುಷ್ಠಾನದಿ ಇಷ್ಟಾರ್ಥವ ಸಲಿಸಿದಗೆ
ವೀರ ವೈರಾಗ್ಯ ಮೂರ್ತಿ ಸಾಕ್ಷಾತ್ ಶಿವನಾದವಗೆ
॥ ಜಯವಾಗಲಿ ॥

ಧರೆಗಿಳಿದ ದೇವನಿವನು ಎಂದೆನಿಸಿದ ಸಿದ್ಧನಿಗೆ
ಮಾದೇಶಗೆ ಕಾಯಕವನು ಕೈ ಹಿಡಿಸಿದ ಶಿವಯೋಗಿಗೆ
'ಶಿವಾಧಿಕ್ಯ ಶಿಖಾಮಣಿ'ಯ ರಚಿಸಿದ ವರ ಗುರುಯತಿಗೆ
ಸಿದ್ದನಂಜ ದೇಶಿಕನಿಗೆ ಜಗಜಂಗಮ ಜ್ಯೋತಿಗೆ
॥ ಜಯವಾಗಲಿ ॥

ಘನಲೀಗದ ತಾನಾದಾ ಘನಲಿಂಗಿಗೆ ಯತಿವರ್ಯಗೆ
ತೋಂಟದ ಶಿವ ಸಿದ್ದೇಶನ ಕಾರುಣ್ಯದ ಶಿಶುವಿಗೇ
'ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ'
ಎಂಬಂಕಿತದಲ್ಲಿ ವಚನ ರಚಿಸಿ ಹಾಡ ಹಾಡಿದಗೆ
॥ ಜಯವಾಗಲಿ ॥

'ವೃಷಭೇಂದ್ರ ವಿಜಯ' ವಿತ್ತ ಇಮ್ಮಡಿ ಶಿವದೇಶಿಕಗೆ
ಸಾಹಿತ್ಯದ ಶ್ರೀಮಂತಗೆ ಸದ್ಗುಣ ಸೌಮನಸಗೆ
ರೇಣುಕವರ ಚೋಳರ ಸಂವಾದವೆಂಬ ಗ್ರಂಥಕೇ
ಟೀಕನಿತ್ತ ಚೆನ್ನಬಸವ ಶಿವಾಚಾರ್ಯವರ್ಯನಿಗೆ
॥ ಜಯವಾಗಲಿ ॥

ಕೋಟಿ ಪಂಚಾಕ್ಷರಿಯನು ಬರೆದೊರೆದಾ ಶಿವಗುರುಗೆ
ಅವರ ಕರದ ಸಂಜಾತಗೆ ಶಿವರಾತ್ರಿ ರಾಜೇಂದ್ರಗೆ
ನವನೂತನ ಪೀಠಾಧಿಪ ಶಿವರಾತ್ರೀ ದೇಶಿಕಗೆ
ತಾರುಣ್ಯದ ಚೇತೋಹಾರಿ ಸ್ಫೂರ್ತಿ ಚೆಲುಮೆ ಆದವಗೆ
॥ ಜಯವಾಗಲಿ ॥

## ಕೊಡುವೆಯೇನೆ...??

**ಕೊಡುವೆಯೇನೆ...?**

ಜೋಳಾದ ಹೊಲದಾ ಗಾಳಿ ಮಂಚಿಕೆ ಮ್ಯಾಲೆ
ಓಲಾಡಿ ಗಿಣಿಯಾ ಓಡಿಸೋಳೇ । ಎಲೆ ಗೌರಿ
ಸೀರೆಯ ಸೆರಗ ಸಡಿಲೀಸೆ ॥೧॥

ಸೆರಗಿನ ಚುಂಗು ಮರುಗ ಮಲ್ಲಿಗೆ ಪುನುಗು
ರಂಗೀನ ರವಿಕೆ ಬಿರಿವೂದೆ । ಎಲೆ ಗೌರಿ
ತಾವರೆಯ ಮೊಗ್ಗು ನಿನ್ನೆದೆ ಮ್ಯಾಲೆ ॥೨॥

ಮಾವನ ಮಗಳೆಂದು ಮಗ್ಗುಲಿಗೆ ಕರೆದರೆ
ಮುಲ ಮುಲ ಎನ್ನಲ್ವೇನೆ । ನಿನ್ನೆದೆಯಲ್ಲಿ
ಕಲ ಕಲ ನುಡಿಯಲ್ವೇನೆ ॥೩॥

ಕಗ್ಗಲ್ಲ ಕಣಿವೇಲಿ ಇಬ್ಬರೇ ಬರುವಾಗ
ತಬ್ಬಿದರೆ ಏನಾಗುತ್ತೇ । ಎದೆ ಗೌರಿ
ಮುತ್ತಿಟ್ಟರೆ ಹ್ಯಾಂಗಿರುತ್ತೆ ॥೪॥

ಅತ್ತೆಯಾ ಮಗಳೆಂದು ಹತ್ತಿರಕೆ ಕರೆದೊಮ್ಮೆ
ಒತ್ತಿದರೆ ಏನನ್ನುತ್ತೆ । ಎಲೆ ಗೌರಿ
ಮುತ್ತಿಟ್ಟರೆ ಹೆಂಗನ್ನುತ್ತೆ ॥೫॥

ಓರಗೆಯ ಗೆಳತೆಂದು ತೇರೀಗೆ ಕರೆದಾರೆ
ಮಾಮರದ ಮರೆಗೆ ನೀ ಬರುವೆಯನೆ । ಎಲೆ ಗೌರಿ
ಸರಗ್ಹಾಸಿ ಸುಖವ ನೀ ಕೊಡುವೆಯೇನೆ ॥೬॥

## ತಂದಾನಿ ತಾನ !

ತಂದಾನಿತಾನ ತಂದನಾನ । ತಾನಿ ।
ತಂದಾನಿ ತಆನೊ ತಂದನಾನ ॥

ಓಣೀಲಿ ಹೋಗೋಳೆ ಜಾಲ ತುರುಬೀನೋಳೆ
ಬಿತ್ತಲೆಲ್ ಗ್ಯಾನ ನಿನಮ್ಯಾಲೆ । ಎಲೆ ಹೆಣ್ಣೆ
ನೆಟ್ಟಿತ್ತು ಕಣ್ಣು ನಿನ್ ಎದೆ ಮ್ಯಾಗೆ ॥೧॥

ಜಿಂಕೆಯ ಮರಿಹಂಗೆ ಜಿಗಿದೊಮ್ಮೆ ನೋಡೋಳೆ
ಕಣ್ಣಲ್ಲೆ ಮಿಂಚ ಹೊಳೆಸೋಳೆ । ಮಂಚದ ಮ್ಯಾಲೆ
ನಗೆಯಾ ಮಲ್ಲಿಗೆಯಾ ಸುರಿಬಾರೆ ॥೨॥

ನಡೆದರೆ ನಡು ಸಣ್ಣ ಮಿಡಿದರೆ ಮುಡಿ ಚುನ್ನ
ತೊಡೆ ಬಾಳೆದಿಂಡು ಬಾವನ್ನ । ಎದೆ ಮ್ಯಾಲಿನ
ಸೆರಗು ಜಾರಿದರೆ ಬಲು ಚೆನ್ನ ॥೩॥

ಸಂಗಾತಿ ಹೆಣ್ಣೇ ಚೆಂಬು ನೇರಿಲೆ ಹೆಣ್ಣೆ
ಮೈಯೆಲ್ಲ ಕಪ್ಪು ಮುಡಿಪ್ಪು । ಜೇನಗೂಡು
ಮನವೆಲ್ಲ ಧವನದ ಘಮ ಘಮ ॥೪॥

ನಿನ್ನೇ ನಿಲ್ಲೇ ಚೆಲ್ಲೆ ನಲ್ಲೀಕಾಯ್ ಕೊಡುತೀನಿ
ತಿಂದಷ್ಟು ರುಚಿಯಾ ಕೊಡುವಂಥಾ। ಬೆಲ್ಲದ
ನಲ್ಲೆ ನಾನೀವೆ ಸವಿ ಬಆರೆ ॥೫॥

## ನಮ್ಮೂರ ದಾರೀಲಿ

ನಮ್ಮೂರ ದಾರೀಲೀ ರಂಗೋಲೆ ಬರೆದವವೆ
ಹೊನ್ನೆ ಹೊಂಬಾಳೆ ಹುಡಿಚೆಲ್ಲಿ

ಹೊನ್ನೆ ಹೊಂಬಾಳೆ ಹುಡಿ ಚೆಲ್ಲಿ ಮುಡಿದವ್ವೆ
ಮುಳ್ಳೀನ ಬೇಲಿ ಕುಡಿಬಾಳೆ ॥

ಬಸದಮ್ಮ ಹೊಸದಾಗಿ ಹಸುರುಟ್ಟು ನಿಂತೌಳೆ
ಮೂಡಲ ಹಸೆಯಾ ಮಣೆ ಏರಿ
ಮೂಡಾಲ ಹಸೆಯಾ ಮಣಿ ಏರಿ ಕಾದೌಳೆ
ಹೆಸರ್ದೇಳೋ ಅರುಸಾರು ಬರಲೆಂದು

ಮಾವು ಬೇವಿನ ಹೂವು ಜೋಕಾಲಿ ಜೀಕ್ಯಾವೆ
ಜೇನು ಜೋಗುಳವಾ ಹಾಡ್ಯಾವೆ
ಜೇನು ಜೋಗಳದ ಹಾಡೂವ ಹೊತ್ತೀಗೆ
ಗಿಣಿರಾಮ ಕಣಿಯಾ ಹೇಳ್ಯಾನೆ

ಸುಗ್ಗೀಯು ಬಂತು ಹಿಗ್ಗಾನೆ ತಂತು
ನುಗ್ಗೀತು ನಮ್ಮೂರ ಕೇರ್‍ಯಾಗೆ
ನಮ್ಮೂರ ಕೇರಿ ತೋರಣ ತೆರೆದಾವೆ
ಹೂರಣ ಹೋಳಿಗೆ ಘಮ ಘಮ !

## ಚೆನ್ನ ಚೆಲುವ ಚಂದಗಾರ

ಚನ್ನ ಚೆಲುವ ಚಂದಗಾರ ಜಂಗಮ । ನಾನು ।
ರನ್ನದಂಥ ಹುಡುಗಿ ಕಾಣೊ ಜಂಗಮ ॥

ಜಂಗುಂಜೋಳಿಗೆ ಜಾಲಗಾರ ಜಂಗಮ । ನೀನು ।
ಮಂಗನ್ಹಾಂಗೆ ಮಾಡುಬ್ಯಾಡ ಜಂಗಮ ॥

ಕಾವಿ ಕಪಿನಿ ಕಮಂಡಲಂ ಜಂಗಮ । ಅವ್ವ ।
ಜುಟ್ಟಿನ ಜೋಡಿ ಬಿಟ್ಟು ಬಾರೊ ಜಂಗಮ ॥

ಸಾಸಲ್ ಕೆರೆ ಸೇದೋಬಾವಿ ಜಂಗಮ । ಇದು ।
ಮೀಸಲು ಕೊಡ ತುಳುಕಿಸಬ್ಯಾಡ ಜಂಗಮ ॥

ಮಣ್ಣೀನ ಕೊಡನಲ್ಲ ಜಂಗಮ । ಇದು ।
ಉಣ್ಣೋರ ಹಣ್ಣು ಕಾಣೊ ಜಂಗಮ ॥

ಮನೆಯೊಳ್ಗೆ ಯಾರೂ ಇಲ್ಲ ಜಂಗಮ । ಒಲೆಮ್ಯಾಲೆ ।
ಕೆನೆ ಹಾಲು ಕಾದೈತೆ ಜಂಗಮ ॥

ಸಕ್ಕರೆ ಸವಿ ತುಂಬಿಕೊಡು ಜಂಗಮ । ಅದು
ಮುಕ್ಕೋನಿಗಾಗಿ ಕಾದೈತೆ ಜಂಗಮ ॥

ಬಿಳಿ ಎಲೆ ಹಸಿ ಅಡ್ಕೆ ಜಂಗಮ
ನಾನೊಬ್ಬಾಳೆ ಮನೆ ಒಳ್ಗೆ ಜಂಗಮ ॥

ಸುಣ್ಣ ಕಂತಾ ನೀನು ಬಾರೋ ಜಂಗಮ । ನಾನು ।
ಸಣ್ಣಾನೆ ಬಾಗ್ಲಾಗೆ ಜಂಗಮ ॥

ತೆರೆಯ ನಿರಿಗೆ ಗರಿಸೀರೆ ಜಂಗಮ । ಅದರ ।
ಮರೆಯಾಗೆ ಸರಿದು ಬಾರೊ ಜಂಗಮ ॥

ಒಳಗೊಂದು ಕಿರುಕೋಣೆ ಜಂಗ । ಅದರ ।
ಸೆರಗು ಮೆರಗು ಚಿನ್ನದ ಸರಿಗೆ ಜಂಗಮ ॥

ಬಾಗ್ಲಲ್ಲೆ ಬಾ ಬಾ ಎಂಬೊ ಸಂಭ್ರಮ । ನಿನಗೆ ।
ಸ್ವಾಗತದ ಕೋರುತ್ತೆ ಗಿಣಿರಾಮ ॥

ಕೋಣೆಯ ಸೆಳೆಮಂಚ ಜಂಗಮ । ಅಲ್ಲಿ ।
ವೀಣೆಯ ದನಿ ಕಾಣೊ ಜಂಗಮ ॥

ತಂತೀಯು ಮಿಡಿಯುತ್ತೆ ಜಂಗಮ । ಅದರ ।
ಚಿಂತೇಯ ದೂರಮಾಡೊ ಜಂಗಮ ॥

## ಜಾಣೆ ಬಾ ಮನೆಗೆ

ಜಾಣೆ ಬಾ ಮನೆಗೆ ನೀ ಸುಮ್ಮನೆ ಮನೆಗೆ
ಬರಬೇಕು ಜಾಣೇ ನನ ಮನೆಗೆ ॥

ನಾನೆ ಒಂದು ಕೋಟೆಯಾಗಿ
ನೀನೆ ಒಂದು ಪೇಟೆಯಾಗಿ
ನೋಟಕೊಂದು ನೀಟದ ಧಾಟಿಯಾಗಿ
ಮೇಟಿ ಇಲ್ಲ ಮನೆ ಕಾಣೆ ಬಾರ ಜಾಣೆ ॥೧॥

ನಾನೆ ಒಂದು ಕದವಾಗಿ
ನೀನೆ ಒಂದು ಬೀಗವಾಗಿ
ಕದವಲ್ಲ ಮನೆ ಇದು ಹದಗೆಟ್ಟು ಹೋಗುವದು
ಬೀಗಿ ಬಾಗ ಬಾಗಿ ಬಾ ಬಾ ಬಾ ॥೨॥

ನಾನೆ ಒಂದು ಜ್ಯೋತಿಯಾಗಿ
ನೀನೆ ಒಂದು ರೀತಿಯಾಗಿ
ಜ್ಯೋತಿ ಇಲ್ಲ ಮನೆಯಿದು ರೀತಿಗೆಟ್ಟು ಹೋಗುವದು
ಚೆಂದೊಳ್ಳೆ ಚೆಲ್ವೆ, ಬಾರೇ ಕಬ್ಬಿಣ ಚಿಣ್ಣೆ ಬಾರೆ ॥೩॥

ಜಾಣೆ ಬಾ ಮನೆಗೆ ನೀ ಸುಮ್ಮನೆ ಮನೆಗೆ
ಬರಬೇಕು ಜಾಣೆ ನನ ಮನೆಗೆ
ಬರಿದಾದ ಮನೆಗೆ ಮುರಿಬಿದ್ದ ಮನೆಗೆ
ತೆರೆ ಸರಿಸಿ ಬಾರ ಬೆಳಕಾಗಿ ನನ್ನ ಮನಕೆ ॥೪॥

## ದಿಬ್ಬಣ ಹೊರಟೈತೆ ಹೊಸ ಹಬ್ಬ !

ಮೂರು ಮಲೆಯಾ ಮ್ಯಾಲೆ

ಬಡಗ ಬಾರೆಯ ಮ್ಯಾಲೆ
ಕಣಿವೆಯ ಕಿಬ್ಬಿ ಕೆನ್ನೆ ಮ್ಯಾಲೆ ॥

ಕಣಿವೆಯ ಕಿಬ್ಬಿ ಕೆನ್ನೇಯ ಮ್ಯಾಲೆ
ದಿಬ್ಬಣ ಹೊರಟೈತೆ ಹೊಸ ಹಬ್ಬ
ಹಸೆಯಾನೇರಿ ನಿಂತ ಹೊಸ ಹೆಣ್ಣ ತೆರದಲ್ಲಿ
ಹಸುರುಟ್ಟು ನಿಂತೌಳೆ ಬನದವ್ವ ॥

ಟೊಂಗೆ ಟೊಂಗೆಗು ಪ್ರಾಯ
ತುಂಬಿದೆ ಹೊಸ ಮಾಯ
ಹಕ್ಕೀ ಸೋಬಾನೆ ಬನವೆಲ್ಲ ॥

ಮಾವು ಬೇವುಗಳೆಲ್ಲ ಮಲ್ಲೀಗೆ ಮುಡಿದವ್ವೆ
ಮನೆ ಮುಂದೆ ಒಳಗೇ ಸಿಂಗಾರ
ಮನೆ ಮುಂದೆ ಒಳಗೇ ಸಿಂಗಾರ ಮಾಡ್ಯಾಳೆ
ಮಳೆ ಬಂದು ಚಳೆಯ ಕೊಟ್ಟೈತೆ ॥

ಬಾಳೆಲ್ಲ ಗೋಳಲ್ಲ ಜೇನು ಜೋನಿಯ ಬೆಲ್ಲ
ಮುಳ್ಳು ಮಾಣಿಕವೂ ಬಂಗಾರ
ಮುಳ್ಳು ಮಾಣಿಕವೂ ಬಂಗಾರ ಬೆಲೆ ತಂದೆ
ಒಳ್ಳೇ ಬಾಳೇವು ಬಾಳೆಂದು ॥

## ಕುಂಜರದ ಗೊಂಬೆ ಕೇಳೆ !

ಕುಂಜರದ ಗೊಂಬೆ ಕೇಳೆ
ಎಲ್ಲ ಜಾಣೆ ಕುಶಲಾದ ಗೊಂಬೆ ಕೇಳೆ ॥

ಈ ಊರ ಗೌಡನ ಮಗಳು ಗಜಗೌರಿ ಎಂಬೋಳು
ಗರಿ ಮುರಿಯದಂಥಾ ನೆರಗ್ಯೋಳು ॥ ಕುಂಜ ॥

ಗರಿ ಮುರಿಯದಂಥ ನೆರಗ್ಯೋಳು ನೆರೆದಾಳು
ಹುಡುಗಿ ಗಜನಿಂಬೆ ರಸಬಾಳೆ ॥ ಕುಂಜ ॥

ಹುಡುಗಿ ಮೈ ನೆರೆದದ್ದು ಗುಲ್ಲು ಗುಲ್ಲಾಗಲು
ಬಿಲ್ಲುಬಾಗಿದ್ದ ಬಳೆಗಾರರ್ಹುಡುಗ ॥ ಕುಂಜ ॥

ಬಿಲ್ಲಾಗಿ ಬಾಗೂತ ಹುಲ್ಲಾಗಿ ಹುದುಗೂತ
ಮಲ್ಲೆ ಮಲ್ಲಿಗೆಯಾ ಮುಡಿಯೂತ ॥ ಕುಂಜ ॥

ಮಲ್ಲೆ ಮಲ್ಲಿಗೆಯಾ ಮುಡಿಯೂತ ಆ ಹುಡುಗ
ಕಲ್ಲು ಸಕ್ಕರೆಯಾ ಸವಿಯಲಿತ್ತ ॥ ಕುಂಜ ॥

ಸಕ್ಕರೆ ಹಂಚುತ್ತ ಅಕ್ಕರವ ಹಾಡುತ್ತ
ಬೆಕ್ಕಿನ ಮರಿಹಂಗೆ ಸುಳಿವೂತಿದ್ದ ॥ ಕುಂಜ ॥

ಸುಳಿ ಸುಳಿದು ಒಳ ಒಳಗೆ ಏನೇನೊ ನಡೆಸಿದ್ದ

ಬಾಲೆಯ ಕಿರುಬೆರಳ ಹಿಚುಕುತ್ತಿದ್ದ ॥ ಕುಂಜ ॥

ಬೆಟ್ಟಕ್ಕೆ ಹೋಗನ ಪುಟ್ಟ ಕಾಲುಂಗುರದವಳ
ಪಟ್ಟೇಯ ಸೀರೆ ಕೊಡಿಸುವೆ ॥ ಕುಂಜ ॥

ಬೆಟ್ಟಕ್ಕೆ ಹೋಗಾನ ಪುಟ್ಟ ಕಾಲುಂಗರದವಳೆ
ಪಟ್ಟೇಯ ಸೀರೆ ಕೊಡಿಸುವೆ ॥ ಕುಂಜ ॥

ಪಟ್ಟೇ ಸೀರೇಗೊಂದು ಚಿಟ್ಟೆ ಬಣ್ಣದ ರವಕೆ
ಚಮಕೀನ ಜುಮಕೀ ಕೊಡಿಸೂವೆ ॥ ಕುಂಜ ॥

ಅಲ್ಲ್ಯೋಗಾನ ಬಾರ ಇಲ್ಲ್ಯೋಗಾನ ಬಾರೆ
ನೆಲ್ಲೀನ ಗದ್ದೇ ಹೊಡೆಬಾಳೆ ॥ ಕುಂಜ ॥

ನೆಲ್ಲೀನ ಗದ್ದೆ ಹೊಡೆಬಾಳೆ ಎದೆಮ್ಯಾಲೆ
ಗುಡುಗುಟ್ಟು ತಾವೆ ಬೆಳವಗಳು ॥ ಕುಂಜ ॥

ಬೆಳವಗಳು ಆಡ್ಯಾವು ನವಿಲುಗಳು ಕುಣಿದಾವು
ಬೆಡಗಿ ಹೋಗೋಣ ನಮ್ಮ ಹೊಲದೆಡೆಗೆ ॥ ಕುಂಜ ॥

ಹೊಲದ ಅಂಚಿನ ಆಲ, ಅಡಿಯ ಹುಲ್ಲಿನ ಹಾಸು
ನೆರೆದ ಹುಡುಗೀಯ ತೊಡೆಮೇಲೆ ॥ ಕುಂಜ ॥

ನೆರೆದ ಹುಡುಗೀಯ ತೊಡೆಮೇಲೆ ಗೀಜುಗ
ಒರಗದಿನು ಹುಡುಗಾ ಕೊಡದಂತೆ ॥ ಕುಂಜ ॥

## ಮದುವೇಯ ಮನೆ ಚೆಂದ !

ಮದುವೆಯ ಮನೆ ಚೆಂದ
ಮದುವೆ ಮಂಟ ಚೆಂದ
ಮದುವೆ ಆಗು ವರ ಚೆಂದ
ಮದುವೆ ಆಗುವ ವರ ಚೆಂದ । ನೋಡೋಕೆ
ಮದುವಣಗಿತ್ತಿಯ ನಾಚಿಕೆ ನಗೆ ಅಂದ

ಹಸೆ ಮಣೆಯ ಒಸಗೆಯಲಿ
ಶಸಿಮುಖಿಯ ನಗೆ ಚೆಲ್ಲಿ
ಹರಿಶಿಣ ಕುಂಕುಮನಾ ಸಿರಿಬಳ್ಳಿ
ಹರಿಶಿಣ ಕುಂಕುಮದಾ ಸಿರಿಬಳ್ಳಿ । ಪರಿಪರಿಯ
ಪರಿಮಳದ ಪರಡಿಯಲಿ ಮದು ತುಂಬಿ ॥ಮದುವೆಯ॥

ಸಗ್ಗಾದ ಸಿರಿ ಬಾರೆ ಹಿಗ್ಗೀನ ತೆನೆ ಬಾರೆ
ಮೊಗ್ಗೆ ಮಲ್ಲಿಗೆಯಾ ಮುಡಿ ಬಾರೆ !

'ಏನ್ರಮ್ಮಾ ಏನ್ಮಾಡ್ತಿದ್ದೀರಿ ಬೇಗ ಏಳಿ,
ಹೆಣ್ಣಿನ ಅಲಂಕಾರ ಆಯ್ತಾ ?

ಗಂಡಿಗೆ ಡ್ರೆಸ್ ಕಳಿಸಿದ್ರಾ ?
ಹೂಂ... ಬೇಗ ಬೇಗ ಏಳಿ,
ಮುಹೂರ್ತಕ್ಕೆ ಹೊತ್ತಾಯ್ತು !'

ಗಿರಿ ರಾಜರ ಮಗಳೆ ಗಿರಿಜಮ್ಮ ನೀ ಬಾರೆ
ಕರುಮಾಡದೊಳಗೆ ಬಿಜಮಾಡೆ ॥ಮದುವೆಯ॥

'ಏನ್ರಿ ಯಾವಾಗ ಬಂದ್ರೀ, ಎಲ್ರೂ ಕ್ಷೆಮ ತಾನೆ?'
'ಏನು ಕ್ಷೇಮವೋ ಏನೊ. ಇದ್ದೀವಿ !'
'ಅಂದ ಹಾಗೆ ನಿಮ್ಮ ಮಗಳ ಲಗ್ನ ಎಲ್ಲಿಗೆ ಬಂತು ?'
ಎಲ್ಲೀಗೆ ಬಂತು ! .. ಕುತ್ತಿಗೇಗೆ ಬಂತು !'
'ಯಾಕ್ರೀ?'
'ಬೆಂಗಳೂರು ಗಂಡು ಕೈಕೊಡ್ತು
ಈಗ ತಿಪಟೂರ ಗಂಡು ಹಿಡೀತಿದ್ದೀವಿ'
'ಹಿಡೀರಿ ಹಿಡೀರಿ ಹಿಡತಾನೆ ಇರಿ ಸಿಗೋವರಗು!'
'ಏನ್ಮಾಡೋದು.. ಬರೀ ದಂಡಯಾತ್ರೇನೇ ಆಗಿದೆ!'
ಹೆ ಹ್ಹೆ ಹ್ಹೆ ಹ್ಹೆ ಹ್ಹೆ ಹ್ಹೆ ಹ್ಹೆ ! ! !

ನೆಂಟರಿಷ್ಟರ ಭೇಟಿ, ಕುಶಲ ಕೇಳುವ ಧಾಟಿ
ಹಸುಳೆಗಳ ಕಾಟ, ಹುಡುಕಾಟ !

'ಅಮ್ಮಾ ಚಾಕ್ಲೇಟು ಕೊಡ್ಸೆ
ಅಮ್ಮಾ ಬಿಸ್ಕೀಟು ಕೊಡ್ಸೆ'
'ಏಯ್ ಯಾಕೆ ಹೀಗೆ ನನ್ನ ಜೀವ ತಿಂತೀಯ
ಬಂದ ಕಡೇಲಿ ಬಾಯ್ ಮುಚ್ಕೊಂಡು ಬಿದ್ದರು !'

'ಏನ್ ಸೀರೆ ಇಲ್ದೋಳ್ಹಾಗೆ
ಇಂಥ ಸೀರೇನಾ ನೀನು ಉಟ್ಕೊಳ್ಳೋದು ?'
'ಅಯ್ಯೋ ನಡೆಯುತ್ತೆ ಬಿಡ್ರಿ. ನನ್ಯಾರು ನೋಡ್ಬೇಕು !'

ಎರಳೆಗಂಗಳ ನೋಟ, ಪಡ್ಡೆಹುಡುಗರ ಬೇಟ

'ಏನ್ ಚೆಂದಾಗವ್ಳೋ ಆ ಹುಡುಗಿ,
ಒಳ್ಳೆ ಜಿಂಕೆ ಜಿಂಕೆ ಮರಿ ನೆನೆದಹಂಗೆ ನೆಗೀತಾಳೆ !'
'ಏನ್ ಮಹಾ ಬಿಡೋಲೋ! ಅದೊಂದು ಹೆಣ್ಣಾ, ಕೆಂಜಿರಲೆ !'
'ಇವಳು.. ಇವಳು ಯಾರ ಮಗಳೋ?'
'ಕೇಳ್ತೀಯಾ .. ನಮ್ಮತ್ತೆ ಮಗಳು'

ಎರಳೆಗಂಗಳ ನೋಟ, ಪಡ್ಡೆ ಹುಡುಗರ ಭೇಟಿ
ಹುಡುಗೀಯರಿಗದು ಪೀಕಲಾಟ "॥ಮದುವೆಯ॥

## ಊಟ ಊಟ ಊಟ !

ಹೆಣ್ಣಿಗೆ ಗಂಡಿನ ಆಸೆ
ಗಂಡಿಗೆ ಹೆಣ್ಣೇ ಭಾಷೆ
ಮದುವೆಗೆ ಬಂದಾ ನೆಂಟರಿಗೆಲ್ಲಾ

ಊಟದ ಮೇಲಾಸೆ ॥

ಊಟ ಊಟ ಊಟ
ನೆಂಟರು ಇಷ್ಟರಿಗೂಟ
ಮದುವೆಗೆ !
ಬಂದಂಥ ಬೀಗರಿಗೂಟ
ಧಾರೆಯ ಊಟ
ಭರ್ಜರಿ ಊಟ
ಬಳಗಕ್ಕೆಲ್ಲ ಭೂರ ಊಟ !

ಹಪ್ಪಲ ಸೊಂಡಿಗೆ ಉಪ್ಪಿನಕಾಯಿ
ತುಪ್ಪದಿ ಕರೆದಿಹ ಕರ್ಜಿಕಾಯಿ

ಫೇ ಪಲಾವು ಕೋಸುಂಬ್ರಿ ಪಲ್ಯ
ದಂರೋಟ್, ಜಿಲೇಬಿ, ಲಡ್ಡೂಗುಡ್ಡೆ
ಚಿರೋಟಿ, ಚಕ್ಕುಲಿ, ಜಹಾಂಗೀರು
ಮಜ್ಜಿಗೆ ನೀರು, ಮೇಲ್ ತಿಳಿಸಾರು ॥

ಊಟದ ವೈಭವ ಎಷ್ಟ್ ಹೇಳ್ಬೇಕು
ಓಹೋಹೋ! ಸಾಕೂ ಸಾಕೂ ಸಾಕೂ
ಹೊಡೆಯಲು ಕುಳಿತರೆ ಮತ್ತೂ ಬೇಕು
ಉಂಡರೆ ಹೊಡೆವುದು ಹೊಟೆಯ ಬಂಕೂ ॥

ಹೋಗಿ ಬರುವೆನು !

ಹೆಣ್ಣು ಹಡೆಯಲಿ ಬ್ಯಾಡ, ಹೆರವರಿಗೆ ಕೊಡಬ್ಯಾಡ
ಹೆಣ್ಣು ಹೋಹಾಗ ಅಳಬ್ಯಾಡ
ಹೆಣ್ಣು ಹೋಹಾಗ ಅಳಬ್ಯಾಡ । ತಾಯವ್ವ
ಸಿಟ್ಟತ್ತಿ ಶಿವನಾ ಬಯ್‌ಬ್ಯಾಡ ॥

ಹೆಣ್ಣು ಹುಟ್ಟಿದ ಮನೆಯ ಮೆಟ್ಟಿಲನ್ನಿಳಿದಾಗ
ಕರುಳು ಕಿತ್ತಂತಾಗೆ ಕಣ್ಣಿರ ಕೋಡಿ
ನೀನು ಹುಟ್ಟಿದ ಮನೆಗೆ ನೀನಿಂದು ಎರವಾಣಿ
ನಿನ್ನೆಂತು ಮರೆಯುವೆವು ಹೇಳೆ ತಂಗಿ ॥೧॥

ಬಂಧುಗಳೆ ಬಾಂಧವರೆ ಮನೆಯ ತುಂಬಿಸಿಕೊಳ್ಳಿ
ಏನೋಂದನರಿಯದೀ ಮುಗುದೆ ನಿಮ್ಮವಳು
ಅಂಗಯ್ಯ ಹೂವಂತೆ ನೋಡಿಕೊಳಿ ಅಳಿಯರೇ
ಅಕ್ಕರೆಯ ಸಕ್ಕರೆಯ ನೀಡಿ ಬೆಳಸಿ ! ॥೨॥

ಅತ್ತೆ ಮಾವಂದಿರೇ ಹೊತ್ತ ತಾಯ್ ತಂದೆಗಳು
ಮತ್ತೆ ಪ್ರೇಮದ ಪತಿಯು ಹಿತದ ಜೊತೆಯು
ಮುತ್ತೈದೆಯಾಗಿ ನೀ ನೂರ್ಕಾಲ ಬಾಳವ್ವ
ಉತ್ತಮರ ಮಗಳೆಂಬ ಕೀರ್ತಿ ಸಲಿಸು ॥೩॥

ನಯವಿರಲಿ ನುಡಿಯಲ್ಲಿ ಭಯವಿರಲಿ ನಡೆಯಲ್ಲಿ
ಒಲವಿರಲಿ ನಿನ್ನೊಲುಮೆ ಬಳಗದಲ್ಲಿ

ಎರಡು ಮನೆ ಬೆಳಕಾಗಿ ಬೆಳಗಿ ಬಾಳೆಲೊ ಮಗಳೇ
ಹಸಿದ ಶಿಶುಗಳ ಬಾಯ ಹೆಣ್ಣೇಯಾಗು ! ॥೪॥

ಹೆತ್ತವರು ಹೊತ್ತವರು ಸಗ್ಗಕಿಂತಲು ಮಿಗಿಲು
ಅದಕಿಂತಲೂ ಮಿಗಿಲು ನನ್ನ ಪತಿಯು
ಆದರೂ ನೆನೆಯುವೆನು ತೌರೂರ ಮಡಿಲನ್ನು
ಮರೆಯದಿರಿ ಹರಸಿರೀ ನಿಮ್ಮ ಮಗಳನ್ನು ॥೫॥

ಹೋಗಿ ಬರುವೆನು ತಾಯಿ ಹೋಗಿ ಬರುವೆನು ತಂದೆ
ಬರಲೆ ಅಕ್ಕಾಜೀ ಅಣ್ಣಯ್ಯ ಗೆಳತಿಯರೇ
ಹೋಗಿ ಬರುವೆನು ನನ್ನ ಮಹಮನೆಯ ದೇವತೆಯೇ
ನಿಮ್ಮ ತಲೆಗೆಂದಿರು ಹೂವ ತರುವೆ ॥೬॥

## ಮದುವೆ ಮದುವೆ ಮದುವೆ

### ಕಲ್ಪನೆಯ ಕುಸುಮವೇ !

ವಿವಾಹಂ ಅನುರಾಗ ಬಂಧು
ಪ್ರಣಯ ಪ್ರದೀಪಂ ಪ್ರೇಮ ಪುಷ್ಕರಾವರ್ಷಂ
ಸ್ತ್ರೀಪುರುಷ ಸಹಯೋಗ ಸಹಕಾರ ರೂಪಂ
ಗ್ರಾಹಸ್ಥ್ಯದೀಕ್ಷಾಂ ಸ್ಥಿತಂ ಸಂಸಾರ ಸಾರೋದಯಂ ॥

ಗಂಡು ಹೆಣ್ಣಿನ ಮನದ ಕಲ್ಪನೆಯ ಕುಸುಮವೇ
ಮದುವೆ ಮದುವೇ ಎಂಬ ಸುಮಧುರವ ಶಬ್ದೇ ॥ಪ॥

ಎದೆ ಎದೆಯ ಬೆಸೆಯುವೀ ಮುದದ ಮಂದಾರವೇ
ಸುಂದರದ ಸ್ವಪ್ನಗಳ ಮೂಡಿಸುತ ಬರುವೇ
ಯುವಕ ಯುವತಿಯರೆದೆಯ ಭಾವನೆಯ ಬೆದಕುವ
ಮಧುರ ಮಿಲನಕೆ ನಾಂದಿ ಹಾಡಿ ಕರೆವೇ ॥೧॥

ನೀಲಿಯಾಗಸದಲ್ಲಿ ಬಿಳಿಮೋಡಗಳ ಮೇಲೆ
ತೇಲಿಸುವೆ ಬೆಳ್ಳಕ್ಕಿ ಬೆಳಗುಗಳ ಮಾಲೆ
ಚುಕ್ಕೆ ಚಂದ್ರರ ಜೋಡಿ ಓಲಾಡಿ ನಡೆದಂತೆ
ಆಡಿಸುವೆ ಮತ್ತೆ ಮತ್ತೆ ಕಾಡಿಯೇ ಕಾಡಿಸುವೆ ! ॥೨॥

ಎಲ್ಲಿಯೋ ಹುಟ್ಟಿ ಮತ್ತೆಲ್ಲಿಯೋ ಬೆಳೆದೆರಡು
ಜೀವಿಗಳಿಗೇ ಬಾಳದೀಕ್ಷೆಯೀವೆ
ಜೇನಹನಿ, ಹಾಲ ಬನಿ ನಿನ್ನ ಹೃದಯದ ಧಮನಿ
ಪ್ರೇಮಿಗಳ ಕೂಡಿಸುವ ಅಮೃತ ಸಂಜೀವಿನಿ ! ॥೩॥

### ಮದುವೆ ಮದುವೆ ಮದುವೆ !

ಮದುವೆ ಮದುವೆ ಮದುವೆ
ಮನಸಿಗೆ ಮುದವನು ತರುವೆ

ಅದ್ದೂರಿಯಿಂದ ಆನಂದ ತಂದ
ಅಂದದ ಚೆಂದದ ಮದುವೆ ॥

ಅದು ಬೀಗರು ಬರುವಾ ದಿವಸ
ಅದು ಹೆಣ್ಣಿ ಬಣ್ಣ ದಿವಸ
ಪಟ್ಟೆಯ ಸೀರೆಯನುಟ್ಟು
ಬಟ್ಟಲ ಕುಂಕುಮವಿಟ್ಟು
ಹಾಲುಕ್ಕಿ ಜೇನು ಹರಿಯಲಿ ಮುಂದೆ
ನಾ ಸೇರೊ ಮನೆಯಲಿ ಎಂದು
ಹಾಡಿ ಹರಸುತ ಬಹಳು
ಓಲಾಡಿ ನಲಿದೂ ಬಹಳು ॥ಮದುವೆ॥

ಅಂದಿನ ಬೆಳಗಿನ ಮುಂದೆ
ಚೆಂದದ ಚೆಲುವಿನ ಮುಂದೆ
ಹೊಸ ಹೊಸ ಬಣ್ಣ ಹರಿಶಿಣ ಸುಣ್ಣ
ಹಸೆಮಣೆ ರಂಗೋಲೆ ಸಿಂಗಾರ
ಮೈಯೆಲ್ಲ ಬಂಗಾರ ವೈಯಾರ ॥ಮದುವೆ॥

ಗದ್ಯ : ನಾಗರ, ಪಿಲ್ಲಿ, ಚೌಲೀತುಂಬು,
ಅತ್ಕಟ್ಟು, ಅಡ್ಡಿಕೆ, ಜುಂಕಿ, ವಂಕಿ
ಜಡೆಹೂ, ತಾವರೆ, ಕುಡಿಯಲಿ ಕುಚ್ಚು
ಕಿವಿಯಲಿ ಓಲೆ, ಸೊಂಟಕೆ ಡಾಬು
ಕಾಲಿನ ಅಂದುಗೆ, ಕಿರುಗೆಜ್ಜೆ !

ಹೆಜ್ಜೆಗು ಹೆಜ್ಜೆಗೂ
ನೆಲ ಮುತ್ತಿಡುವೊಲು
ಗಂಭೀರ ಗತಿಯಲಿ ನಡೆಯುವರು
ನರ್ತಕಿಯರ ನಡೆ ನಾಟ್ಯದೊಲು
ಎತ್ತೆತ್ತಲು ಮೆರೆದಾಡುವರು ॥ಮದುವೆ॥

ವಧುವರರಿಬ್ಬರ ಇದಿರಲಿ ನಿಲಿಸಿ
ಅಂತರ ಪಟವನು ಹಿಡಿಯುವರು
ಜೀರಿಗೆ ಕಂಪು ಬೆಲ್ಲದ ಸೊಂಪು
ಸೊಮ್ಮು ಸವಿಯು ನಿಮ್ಮ ಬಾಳಿನಲಿ
ಸದಾ ಕಾಲವೂ ತುಂಬಿರಲಿ
ಈ ಶುಭ ಕಾಮನೆ ಕೂಡಿ
ಜೀರಿಗೆ ಬೆಲ್ಲವ ಸುರಿಸುವರು ॥ಮದುವೆ॥

ಧಾರಾಕಾರದಿ ಧಾರೆಯು ನಡೆವುದು
ಆತ್ಮೀಯರುಗಳ ಸಂತೋಷ
ಅಭಿಮಾನಿಗಳ ಸಮಾವೇಶ
ತುಂಬದಿ ಹಾಲಿನ ತಂಬಿಗೆ ಹಿಡಿದ
ಎರೆವರು ವಧುವರ ಕೈಮೇಲೆ
ಈ ವಧು ಅಣ್ಣಾ ನಿನ್ನಾಕೆ
ನಿನ್ನ ವಸ್ತುವಿದು ನೋಡಿಕೊ
ಪ್ರೀತಿಯ ಪರಿಮಳ ಚೆಲ್ಲನುತ ॥ಮದುವೆ॥

ಧಾರೆಯು ಮುಗಿದಾ ಮೇಲೆ
ಮಾಂಗಲ್ಯ ಧಾರಣ ಕಾರ್ಯ
ಸಂಬಂಧದ ಮಾಲಿಕೆ ಹಾಕಿಸಿ
ಸೌಹಾರ್ದದ ಸೌರಭ ಬೆರೆಸಿ
ಚಿನ್ನದ ತಾಳಿಯ ಹೆಣ್ಣಿನ ಕೊರಳಿಗೆ
ಧಾರಣಗೈಸಿ ವರನಿಂದ

ಶ್ಲೋಕ : ಮಾಂಗಲ್ಯ ತಂತು ನಾನೇನ
ಮಮ ಜೀವನ ಹೇತುನಾ
ಕಂಠೇ ಬದ್ನಾಮಿ ದಾಕ್ಷಾಯಿಣಿ
ಹಿರಣ್ಯ ಸದೇಪಿ ಘ್ಯಣ್ಮತಾ ದೀಘಮಾಯುಂ ॥

ಓಲಗ ಊದಿಸಿ ಮಂತ್ರವ ಘೋಷಿಸಿ
ಒಕ್ಕೊರಲಲಿ ಶುಭ ಹಾರೈಸಿ
ಸೇಸೆಯನಕ್ಕುವರೊಲವಿನಲಿ ॥ಮದುವೆ॥

ಮದುವೆ ಮದುವೆ ಮದುವೆ
ಮನಸಿಗೆ ಮುದವನು ತರುವೆ
ಅದ್ದೂರಿಯಿಂದ ಆನಂದ ತಂದ
ಅಂದದ ಚೆಂದದ ಮದುವೆ ॥

## ಸೋ ಎನ್ನೀರೆ, ಸೋಬಾನೆ ಎನ್ನೀರೆ !

ಸೋ ಎನ್ನೀರೆ
ಸೋಬಾನೆ ತನ್ನೀರೆ ॥

ಗಿರಿಜೆ ಕಲ್ಯಾಣಿ ಗುಣವಂತೆ
ಹದಿ ಹರೆಯದವಳೇ ಹಸೆಗೇಳು ॥ಸೋ॥

ಬಣ್ಣವ ಉಡಿಸೀ ಹಣ್ಣ ಸೋಗಿಲ ತುಂಬಿ
ಪುಣ್ವಂತೆಯಾಗಿ ಬದುಕಂತ
ಪುಣ್ವಂತೆಆಗಿ ಬದುಕುತ । ಅವಳ ತಾಯಿ
ಹಣ್ಣಾ ತುಂಬಿಗಳು ಮಡಲೀಗೆ ॥

ಮುತ್ತೀನ ಕಂಬದ ಒತತಿಲ್ ನಿಂತಿರೊ ಬಾಲೆ
ಇತ್ತ ಬಾರಿತ್ತ ಇವರೀಗೆ
ಇತ್ತ ಬಾರಿತ್ತಾ ಇವರೀಗೆ ನಮ್ಮಮ್ಮ
ನಿನ್ ಕೊಟ್ಟೇವು ಮನದುಂಬು ॥ಸೋ॥

ಹೆಣ್ನೋರು ಬರುವಾಗ ಸಣಮಾವು ಫಲವಾದೊ
ಸಣ್ಣ ಬಣ್ಣದಕ್ಕಿ ಸಮನಾದೊ
ಸಣ್ಣ ಬಣ್ಣದಕ್ಕಿ ಸಮನಾದೊ । ನಮ್ಮನೆಯ
ಹೆಣ್ಣು ಬರ ಬಾರ ಜಯ ಜಽಯ ॥ಸೋ॥

ಎದ್ದು ಬರೊ ಹೇಳೊ ನಿದ್ದೆಗಣ್ಣೈದೇರ
ಮದ್ದಾನೆ ಗತಕೆ ನಲಿವವರ

ಮದ್ದಾನೆ ಗತಕೆ ನಲಿವವರ । ಮುತ್ತೈದೇರ
ಎದ್ದು ಶೋಭನಕೆ ಬರಹೇಳೋ ॥ಸೋ॥

## ಚೈತ್ರ ನಂದನದಲ್ಲಿ

ವಧು/ವರ : ಚೈತ್ರ ನಂದನದಲ್ಲಿ ಚಿತ್ರ ಕೂಟ
ಏನೇನೊ ಹುಡುಕಾಟ
ಎಲ್ಲೆಡೆಯು ಹೊಸಬೇಟ
ತೊರೆ ತಡಿ ತೊಡೆಯಲ್ಲಿ ಮುಡುಕುವಾಟ ॥

ವರ : ಪೊದೆ ಪೊದೆಯು ಬೆದೆಯ ಮೆದೆ
ಮೋದ ತುಂಬಿದ ಮಜಲು
ಕೋಗಿಲೆಯ ಕಂಠದಲಿ ಗೀತ ಪ್ರಣಯ
ಮಲ್ಲಿಗೆಯ ಬಳ್ಳಿಯಲ್ಲಿ ಮೊಳೆಹಲ್ಲು ಮೂಡಿದರ
ಚಿಗುರು ಗಲ್ಲದ ಮೇಲೆ ಉಗುರು ಗಾಯ ॥೧॥

ವಧು : ಹಸಿರು ಸುಸಿಲನು ಸೂಸೆ
ಶಶಿ ಇಳಿದ ನಸೆ ತುಂಬೆ
ಪಿಸುಮಾತು ತೆಂಗುಗರಿ ಬಾಳೆಗಳಲಿ
ದುಂಬಿ ಚುಂಬನವೀಯೆ
ತುಟಿಯ ಸವರಿದೆ ಬಳ್ಳಿ
ತೆಕ್ಕೆ ಬಿದ್ದಿವೆ ಮಾವು–ಬೇವು ಇಲ್ಲಿ ॥೨॥

ವರ : ಎಲ್ಲೆಲ್ಲು ಹೊಸ ಹರಯ
ಹೊಸ ಪ್ರಣಯ ಹೊಸ ಹುರುಪು
ಸೂರೆಯಾಗಿದೆ ಸೊಬಗು ಧಾತ್ರಿಯಲ್ಲಿ
ಓಹೋಹೋ ! ಸಾಕಿನ್ನು ಮಾತು ಸೋತಿದ ನುಡಿಸಿ
ಅಪ್ಪುಗೆಯ ಹೆಪ್ಪಿರಲಿ ಬಾರೆ ಮಳ್ಳಿ ॥೩॥

ಇಬ್ಬರೂ : ಒಂದಾಗಿ ಚೆಂದಾಗಿ ಅಂದದಾ ಹೂವಾಗಿ
ಅರಳೋಣ ಬಾಳೋನ ಸೌರಭದ ಸೂಸೋಣ
ನೆಳಲಾಗಿ ಬಿಳಿಲಾಗಿ ಕೆಳೆತನದಿ ಬೆಳೆಯೋಣ
ಸಂತಾನ ಪಡೆದು ನಾವ್ ನೂರ್ಕಾಲ ಬಾಳೋಣ ॥೪॥

## ಅಷ್ಟಲಕ್ಷ್ಮಿಯರು : ಔಪಾಸನೆ

## ಅಷ್ಟಲಕ್ಷ್ಮಿಯರು

ಸಕಲ ಸಂಕಷ್ಟಗಳ ಕ್ಲಿಷ್ಟವಿಲ್ಲದೆ ಕಲೆದು
ಇಷ್ಟಾರ್ಥಗಳನೀವ ಅಷ್ಟಲಕ್ಷ್ಮಿಯರರೇ ॥ಪ॥

ತುಷ್ಟಿ ಪುಷ್ಟಿಯ ನೀಡಿ ಹರುಷ ವೃಷ್ಟಿಯ ಕರೆವ
ಸಂಶ್ಲಿಷ್ಟ ಸಂಪೂಜ್ಯ ಶ್ರೇಷ್ಠ ಕನ್ಯೆಯರೇ ॥ಅನು.ಪ॥

ಧನ, ಧಾನ್ಯ, ಗಜ, ವೀರ, ಆದಿ, ವರ ಸಂತಾನ,
ವಿಜಯ, ಐಶ್ವರ್ಯವೆನುವಷ್ಟ ಶುಭನಾಮೆಯರ
ಆ ಲಕ್ಷ್ಮಿ ಈ ಲಕ್ಷ್ಮಿ ವರಲಕ್ಷ್ಮಿ ಮಹಾಲಕ್ಷ್ಮಿ
ಕೀರ್ತಿ ಕೈವಲ್ಯಗಳ ಶಾಂತಿ ಸೌಹಾರ್ದಗಳ ಧವಳಲಕ್ಷ್ಮಿ ॥೧॥

ಎನಿತೊ ನಾಮಗಳಿಂದ
ಎನಿತೊ ರೂಪಗಳಿಂದ
ಎನಿತೆನಿತೋ ಭಾವಗಳ ದೀಪ್ತಿಯಿಂದ
ಮೆರೆವ ಸುಖದಾತೆಯರೆ
ಸರ್ವ ಶುಭಕಾಮೆಯರೆ
ಓ ಅಷ್ಟಲಕ್ಷ್ಮಿಯರೆ
ನಿಮಗೆ ಶರಣಾರ್ಥಿ ॥೨॥

ಧನಲಕ್ಷ್ಮಿ

ಶ್ಲೋಕ
ಧನಲಕ್ಷ್ಮಿ ದಯಪೂರ್ಣೇ
ಕೋಟಿ ಸೂರ್ಯ ಪ್ರಭಾಮಯೇ
ಶಂಖ ಚಕ್ರಧರೇ ದೇವಿ ಮನೋಲ್ಲಾಸ ನಮೋಸ್ತುತೇ ॥

ಇಕ್ಷು ಕೋದಂಡಪಾಣಿಯೇ ಭವ್ಯೇ
ಪುಷ್ಪ ಬಾಣಾಸ್ತು ಶೋಭಿತೇ
ಅಕ್ಷಯಾಮೃತ ಕುಂಭೇ ಅಮೃತರೂಪಿ ನಮೋಸ್ತುತೇ ॥

ಹಾಡು :
ದಳವೆರೆದ ಪದ್ಮದಲಿ ಕುಳಿತು ಪದ್ಮಾಸನದಿ
ಮುಗುಳು ನಗೆ ಮಂದಾರದರಳುಗಳ ಚೆಲ್ಲಿ
ಹೊನ್ನ ಹೊಳೆ ಹರಿಸುತಲಿ ಅಭಯ ಹಸ್ತವ ತೋರಿ
ತವನಿಧಿಯ ತೊಡೆಮೇಲೆ ಇರಿಸಿಕೊಂಡಿಹ ದೇವೆ ॥೧॥

ಧನಲಕ್ಷ್ಮಿ ದಿನಲಕ್ಷ್ಮಿ ನಿತ್ಯನೂತನಲಕಷ್ಮಿ
ಸೌಭಾಗ್ಯ ಶ್ರೀಲಕ್ಷ್ಮಿ ಓ ಕನಕಲಕ್ಷ್ಮಿ
ನಿನ್ನ ಶ್ರೀ ಚರಣಕ್ಕೆ ನನ್ನ ನಮನ
ನಿನ್ನ ಪದಯುಗಲಕ್ಕೆ ಭಕ್ತಿ ನಮನ ॥೨॥

ಧಾನ್ಯಲಕ್ಷ್ಮಿ
ಸುವ್ವೀ ಸುವ್ವೀ ಸುವ್ವಿ ಸುಯ್ಯಾಲೋ
ಸುವ್ವೀ ಸುವ್ವಿ ಸುವ್ವರೆ ಸುಯ್ಯಲಾಲೋ ॥
ಸುಗ್ಗಿ ಸೊಗವ ತಾರೊ
ಹಿಗ್ಗಿ ಹಾಡ ಹಾಡೋ ॥ಸುವ್ವೀ॥

ಭಾರಮ್ಮಾ ಧಾನ್ಯಲಕ್ಷ್ಮಿ ಬಾ ಮನೆಗೆ
ತೆನೆ ತೆನೆಗಳ ತಲೆದೂಗಿಸಿ ಬಾರೆ ಮನೆಗೆ ॥ಸುವ್ವೀ॥

ಮಾಗಿ ಮುಗಿದು ರಾಗಿ ತುಂಬಿ
ನವಣೆ ಕವಣೆಯಾಡುತಿಹುದು !

ತೆಂಗು ನಗೆಯ ನಕ್ಕಾಗ
ಬಾಳ ತೋಳ ಬೀಸುವುದು !
ಬಾರಮ್ಮಾ ಧಾನ್ಯಲಕ್ಷ್ಮಿ ಬಾ ಮನೆಗೆ
ತೆನೆ ತೆನೆಗಳ ತಲೆದೂಗಿಸಿ ಬಾರ ಮನೆಗೆ ॥ಸುವ್ವಿ॥ ೧

ಅಡಕೆ ನುಡಿಯ ಮಡಿಯಹಾಸಿ
ಮಡಕೆ ಕಾಳು ತಡಿಯ ಬೀಸಿ
ಬತ್ತ ಮುತ್ತನಿಡಿವುಆಗ ಕತ್ತೆತ್ತಿದ ಸಜ್ಜೆಗೇ
ಸಾಸಿವೆ ಪಿಸು ನುಡಿವುದು ।ಬಾರಮ್ಮಾ ॥ ೨

ಹರಿವ ಹೊನಲು ಮೊರೆವ ತುಂಬಿ
ಕೋಗಿಲೆಗಳ ಕೂಜನsss
ಹಸುರಿನಲೀ ಹೆಸರು ಬರೆವ
ನವ ವಸಂತ ಭಾಜನsss ॥ಬಾರಮ್ಮಾ॥ ೩

ತನುತುಂಬಿ ಮನತುಂಬಿ
ಮನೆಮುಡುಕು ಕುಡಿಕೆ ತುಂಬಿ
ಕಣಜ ಕಟ್ಟೆಯ ತುಂಬಿ
ಚೀಲಗಳಲಿ ಚೋಲತುಂಬಿ ।ಬಾರಮ್ಮಾ। ॥ಸುವ್ವಿ॥ ೪

ಎಳ್ಳು ಜೀರಿಗೆ ಬೆಳೆದು
ಒಳ್ಳೆ ಯಾಲಕ್ಕಿ ಬೆಳೆದು
ಸಿಹಿ ಬೆಲ್ಲ ಕಹಿ ಬೇವು
ಸಮಪಾಲೊಳೆಲ್ಲ ಬೆಳೆದು
ಬಾಳು ಸುಭಿಕ್ಷವೆನಿಸಿ ಮರದು
ನಲಿಯುವಂತೆ ಮಾಡು ತಾಯಿ ॥ಬಾರಮ್ಮ॥ ॥ಸುವ್ವಿ॥ ೫

ಎಲ್ಲರ ಮನೆ ಮನೆಗಳಲೂ
ಹಾಲುಕ್ಕಿ ಜೇನುಮಳೆಗರೆವಂತೆ ಮಾಡಮ್ಮ
ಅನ್ನವೇ ಬ್ರಹ್ಮವೆಂಬ
ನಿತ್ಯ ಸತ್ಯ ಸಾರಮ್ಮಾ ॥ಬಾರಮ್ಮಾ॥ ॥ಸುವ್ವಿ॥ ೬

## ಗಜಲಕ್ಷ್ಮಿ

ಗಜವೆರಡು ಭುಜದಂತೆ ಕರೆವೆತ್ತಿ ಕರೆವುತಿರೆ
ಅಗಚೆಯೊಜೆಯ ತೆರದಿ ತಪಗೈವ ಗಜಲಕ್ಷ್ಮಿ
ನಿಜ ತೇಜದೊಳು ಮೆರೆವ ಮುದ ಬೆರೆದ ಗಂಭೀರೆ
ಪದ್ಮಪಾಣಿಯೆ ದೇವಿ ಮುಗ್ಧವದನ ಮಹೋದಯೇ ॥೧॥

ಚತುರ್ಭುಜೇ ಚಾರುರೂಪ ಚದುರೇ
ಚಂದ್ರ ಚಕೋರ ನೇತ್ರೇ ದೇವಿ
ಗಜಲಕ್ಷ್ಮೀ ನಮೋಸ್ತುತೇ ॥೨॥

ವರದೇ ವರವ ಹಸ್ತೇ
ಶಿರೋರತ್ನ ಮನೋಹರೀ

ರತ್ನ ಕಾಂತಿರದೇ ದೇವಿ
ಗಜಲಕ್ಷ್ಮಿ ನಮೋಸ್ತುತೇ ॥೩॥

ಪದ್ಮ ಸದ್ಮ ಸ್ಥಿತೇ ದೇವಿ
ಪದ್ಮರಾಗ ಪ್ರಭಾಮಯೀ
ಪದ್ಮಪಾಣಿ ಪ್ರಬೋದಿತೇ ದೇವಿ
ಗಜಲಕ್ಷ್ಮಿ ನಮೋಸ್ತುತೇ
ಶ್ರೀ ಲಕ್ಷ್ಮಿ ನಮೋಸ್ತುತೇ ॥೪॥

ನಿಮ್ಮ ಚರಣಗಳಲ್ಲಿ ಭಕ್ತಿ ನಮನ
ನನ್ನ ಪ್ರಾಂಜಲ ಮನದ ಕೋಟಿ ನಮನ

## ಆದಿಲಕ್ಷ್ಮಿ

**ರಾಗಭೂತಾಳಿ**

ಉದಯ ರಾಗದ ಕೂಡೆ ಹೂ ಅರಳಿ ನಗುವಂತೆ
ಮಡಿಲಿನಲಿ ಪವಡಿಸಿಹ ಹಸುಳೆ ಕಣ್ ತೆರೆದಂತೆ
ಚಂಚು ಸಂಪುಟದೆರೆದು ಕುಕಿಲಿಡುವ ಮರಿಯಂತೆ
ಬನದ ಕಾರಂಜಿಯಲಿ ನೀರನಟಿ ಪುಟಿವಂತೆ

ಏಳು ಓ ಲಕ್ಷ್ಮಿ
ಆದಿ ಮೂಲದ ಲಕ್ಷ್ಮಿ
ಓ ಆದಿಲಕ್ಷ್ಮಿ ॥

ಎದೆಯ ಹೊಂಬಟ್ಟಲಿನ ಅಮಲ ತೀರ್ಥವನೆರೆದು
ಭಾವ ಕುಸುಮಗಳಿಂದ ನಿನ್ನ ಪಾದವ ರಚಿಸಿ
ಕಣ್ಣ ನೀಲಾಂಜನದ ಹೊನ್ನಿನಾರತಿ ಬೆಳಗಿ
ಮಣಿದ ಶಿರ, ಮುಗಿದ ಕೈ, ತೆರೆ ಮನಗಳಲಿ

ನಾ ನಮಿಸುವೆನಿದೋ
ನಿನ್ನ ಪದಕಮಲದಲಿ
ನಾ ಮಣಿವೆನಿದೋ ॥

## ವೀರಲಕ್ಷ್ಮಿ

[ ಢಂ ಢಡಂ ಢಂ ಢಡಂ ಶಬ್ದಗಳೊಡನೆ ಪದ್ಮ ಆರಂಭವಾಗಲಿ]

ವೀರಲಕ್ಷ್ಮ ಧೀರಲಕ್ಷ್ಮಿ ನಿನಗೆ ಸ್ವಾಗತ
ಧೈಯಲಕ್ಷ್ಮಿ ಧೃತಿರ್ಲಲಕ್ಷ್ಮಿ ನಿನಗೆ ಸ್ವಾಗತ ॥

ಕಾಂಚನ ಕಮನೀಯ ನೀನು
ಪಾಂಚಜನ್ಯ ಮೊಳಗಿಸುವರೆ (ಭೌ ಎಂಬ ಶಂಖನಾದ)
ವಂಚಕರನು ಮರ್ಧಿಸುತ್ತೇ (ಖಡ್ಗ ಖಡ್ಗಗಳ ಖಣಿಲ್ ನಾದ)

ಕಂಚುಕಂಠ ಘೋಷಿಸುತೇ ॥ (ನಗಾರಿ ಭೇರಿ ರವಗಳು)

(ಜಯವಾಗಲಿಮ ಜಯವಾಗಲಿ ಎಂಬ ಜಯಘೋಷ)
ಮಿಂಚಿನಂತೆ ಸಂಚಳಿಸಿ
ಉತ್ಸಾಹದಿ ಝುಘಮಘಿಸಿ ।
ನಮ್ಮ ಧಮನಿ ಧಮನಿಯಲ್ಲಿ
ನವ ಸ್ಫೂರ್ತಿ ತುಂಬುವೇ
ಚೈತನ್ಯದಾಯಿಯೇ ಔನ್ನತ್ಯ ವೇದಿಯೇ ॥

ವೀರಲಕ್ಷ್ಮಿ ಧೀರಲಕ್ಷ್ಮಿ ನಿನಗೆ ಸ್ವಾಗತ
ಧೈರ್ಯಲಕ್ಷ್ಮಿ ಧೃತಿರ್ಲಕ್ಷ್ಮಿ ನಿನಗೆ ಸ್ವಾಗತ ॥

## ವಿಜಯಲಕ್ಷ್ಮಿ

ವಿಜಯತೇ ವಿಜಯತೇ ವಿಜಯತೇ ।
ವಿಜಯಲಕ್ಷ್ಮಿ ವಿಭವಲಕ್ಷ್ಮಿ ವಿಜಯತೇ ॥ಪ॥
ಜನಮನದಾ ಜಯಲಕ್ಷ್ಮೀ ವಿಜಯತೇ ।
ಸಕಲ ಸೌಭಾಗ್ಯಲಕ್ಷ್ಮಿ ವಿಜಯತೇ ॥ಅನು, ಪ॥

ಖಡ್ಗಪಾಣಿ ಕೈಗುರಾಣಿ
ಯುದ್ಧ ಕಲಾ ಕಲ್ಯಾಣೀ
ಏಳು ಮಲೆಯ ಮೇಲೆ ಮೆರೆವ
ಶ್ರೀನಿವಾಸ ವಾಸಿನೀ
ಓ ಅಮಲೆ, ಓ ವಿಮಲೆ, ಜಯಜಯನಾರಾಯಣೀ ॥೧॥

ಸರ್ವಮಂಗಳೇ ಶಿವೇ ಸರ್ವಶ್ರೀ ಶುಭಪ್ರದೇ
ತಿತಿರಕ್ಷೇ ಸ್ಥಿತಿರೂಪಿಣಿ ಸೃಷ್ಟಿ ಸಂರಕ್ಷಳೇ
ಮೋಕ್ಷದಾತೆ ಮಹಾದೇವಿ ಮಂಗಲೆ ಸೌಮಂಗಲೆ ॥೨॥

ಅದ್ವಿತೀಯೆ ಅತ್ಯಮೋಘೆ ನಿತ್ಯಸತ್ಯ ಶೋಭಿತೇ
ಅನುರಾಗದ ಅನುರಕ್ತಿಯ ಅನುರಣನದ ನಮನಗಳು
ವಿಜಯಲಕ್ಷ್ಮಿ ನಮೋ ತಾಯೆ ನಿನ್ನಡಿಗೇ ಮುಡಿಯಿಡುತೇ
ಶ್ರೀಲಕ್ಷ್ಮೀ ಶುಭಲಕ್ಷ್ಮೀ ವಿಜಯಲಕ್ಷ್ಮಿ ಜೈ ಜೈ ಜೈ ॥೩॥

## ಐಶ್ವರ್ಯಲಕ್ಷ್ಮಿ

ಬಾರಮ್ಮ ಬಾ ತಾಯೆ ಬಾರೆ ಸಿರಿದೇವಿ
ಐಶ್ವರ್ಯ ಲಕ್ಷ್ಮಿಯೇ ಬಾರೆ ಶ್ರೀದೇವಿ ॥ಪ॥
ಸೌಭಾಗ್ಯ ಸೌಶೀಲ್ಯ ಸೌಜನ್ಯ ಸಾಕಾರೆ
ಸಕಲ ಸಂಪದವೀವ ಶ್ರೀಲಕ್ಷ್ಮಿ ಬಾರೆ ॥ಅನು, ಪ॥

ಕಿಣಿ ಕಿಣಿರು ಕಿರುಗೆಜ್ಜೆ ಗೆಜ್ಜೆಗಳ ಝಣರೆನಿಸಿ
ಹೆಜ್ಜೆ ಹಾಕುತ ಬಾರೆ ಲಜ್ಜೆ ಬೆರೆಸೀ
ಸಜ್ಜಾದ ಹಸೆಮಣೆಗೆ ಬಿಜಗೈವ ಹೆಣ್ಣಂತೆ

ಬಿಜ್ಜೆ ಬಾರೇ ನಮ್ಮ ಸಜ್ಜೆ ಮನೆಗೆ ॥೧॥

ಕಡಗ ಕಂಕಣ ಡಾಬು ಸೊಂಟದೊಡ್ಯಾಣ
ಮುತ್ತು ರತ್ನದ ಹಾರ ಕೊರಳಿನಾಭರಣ
ವಜ್ರ ವೈಢೂರ್ಯಗಳ ಬೆಂಡೋಲೆ ಭೂಷಣsss
ಶಿರದಿ ಶೋಭಿಸುತಿರುವ ಮಕುಟದಾವರಣಾ ॥೨॥

ಬಿಳಿಯ ಪತ್ತಲ ಉಟ್ಟು ಬೆಡಗಿ ನೀ ಬಾರೇ
ಇಳೆಯೊಳೆಲ್ಲರು ನಿನಗೆ ಕಾದಿಹರು ಬಾರೇ
ನಿನ್ನ ಮುದ್ದಿನ ಮುಗುಳು ನಾವೆಲ್ಲ ಕಾದಿಹೆವು
ಐಸಿರಿಯ ಹೊಳೆ ಹರಿಸಿ ಬಾರಮ್ಮ ಬಾರೆ ॥೩॥

ಸಾರಣೆಯ ಕಾರಣೆಯ ಮತೆಯ ಮಡಿ ಮಾಡಿ
ಪಾರಣೆಯ ಪರಮಾನ್ನ ಭಕ್ಷ್ಯವಣಿ ಮಾಡಿ
ಪ್ರಾಂಜಲದ ಮನದಲ್ಲಿ ಮುಗಿದು ಕೈಜೋಡಿ
ನಿಂದಿಹೆವು ನಾವೆಲ್ಲ ಬಾರೆ ದಯಮಾಡಿ ॥೪॥

## ಸಂತಾನಲಕ್ಷ್ಮಿ

ಆನಂದದ ಅನುರಾಗದ ಸಂತಾನಲಕ್ಷ್ಮಿ ಬಾರಮ್ಮಾ
ಕುಣಿಕುಣಿದಾಡುವ ನಲಿನಲಿದಾಡುವ ತುಂಟರ ತೊಡೆ ಮೇಲಿರಿಸಮ್ಮಾ ॥

ನಂದಗೋಕುಲದ ಕಂದನ ತೆರದಲಿ
ನಂದನೆಯರ ಚಕ್ಕಂದದೊಳಾಡಿಸಿ
ಅಂದಾಟದಲಿ ಮಂದಿಯ ಮೆರೆಸುವ
ಮುದ್ದುಕೃಷ್ಣರನು ಮಡಿಲೊಳಗಿರಿಸಮ್ಮಾ ॥೧॥

ಹರನೊಲಿದಳು ಆ ಗಿರಿಜೇ
ಹರಿಯ ಮೆಚ್ಚಿದಳು ಶ್ರೀಲಲಿತೇ
ಇಂದ್ರನನಪ್ಪಿದ ಇಂದ್ರಾಣಿಯೆ ತೆರ
ಒಲವಿನ ಸಂತಾನ ನೀಡಮ್ಮಾ
ಚೆಲುವಿನ ಸಂತಾನ ನೀಡಮ್ಮಾ ॥೨॥

ಭರತವಾಕ್ಯ
ಇಂತಷ್ಟ ಲಕ್ಷ್ಮೀಯರ ನಾವೆಲ್ಲ ಭಜಿಸಿ
ಎಲ್ಲ ಸಂಕಟಗಳನು ಮಂಜಿನೊಲು ಹರಿಸಿ
ಸಕಲ ಸುಖ ಸಂತಾನ ಸೌಭಾಗ್ಯಗಳ ಗಳಿಸಿ
ಚಿರಕಾಲ ಬಾಳೋಣ ಆನಂದ ಹರಿಸಿ ॥೧॥

ಧನಧಾನ್ಯ ವರವೀರ ಐಸಿರಿಯ ಬಹುಮಾನ
ಜಯ ವಿಜಯ ಆರೋಗ್ಯ ಎಲ್ಲ ಶುಭಕಾಮ
ಮನೆ ಮನೆಗು ಮನ ಮನಕು ತುಂಬಿ ಬರಲೀ ಮಾನ
ಸರ್ವರಿಗು ಶುಭಮಕ್ಕೆ ಗೆಲಮಕ್ಕೆ ತುದಿಗಕ್ಕೆ ಮಂಗಲಂ ॥

॥ ಓಂ ತತ್ ಸತ್ ॥

ಮಹಾಲಕ್ಷ್ಮ್ಯಷ್ಟಕರ್ಮ

ನಮಸ್ತೇಽಸ್ತು ಮಹಾಮಾಯೆ ಶ್ರೀಪೀಠೇ ಸುರಪೂಜಿತೇ
ಶಂಕಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ ॥೧॥

ನಮಸ್ತೇ ಗರುಡಾರೂಢೇ ಕೋಲಾಸುರ ಭಯಂಕರೀ
ಸರ್ವಪಾಪ ಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ ॥೨॥

ಸರ್ವಜ್ಞೇ ಸರ್ವವರದೇ ಸರ್ವದುಷ್ಟ ಭಯಂಕರಿ
ಸರ್ವದುಃಖಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ ॥೩॥

ಸಿದ್ಧಿ ಬುದ್ಧಿಪ್ರದೇ ದೇವಿ ಭುಕ್ತಿಮುಕ್ತ ಪ್ರದಾಯಿನಿ
ಮಂತ್ರಮೂರ್ತೇ ಸದಾದೇವಿ ಮಹಾಲಕ್ಷ್ಮೀ ನಮೋಸ್ತುತೇ ॥೪॥

ಆದ್ಯಂತ ರಹಿತೇದೇವಿ ಆದ್ಯಾಶಕ್ತೇ ಮಹೇಶ್ವರೀ
ಯೋಗಜ್ಞೇ ಯೋಗಸಂಭೂತೇ ಮಹಾಲಕ್ಷ್ಮೀ ನಮೋಸ್ತುತೇ ॥೫॥

ಸ್ಥೂಲಸೂಕ್ಷ್ಮ ಮಹಾರೌದ್ರೇ ಮಹಾಶ್ಕತೇ ಮಹೋದಯೇ
ಮಹಾಪಾಪಹರೇ ದೇವಿ ಮಹಾಲಕ್ಷ್ಮೀ ನಮೋಸ್ತುತೇ ॥೬॥

ಪದ್ಮಾಸನಸ್ಥಿತೇ ದೇವಿ ಪರಬ್ರಹ್ಮ ಸ್ವರೂಪಿಣಿ
ಪರಮೇಶಿ ಜಗನ್ಮಾತರ್ಮಹಾಲಕ್ಷ್ಮಿ ನಮೂಸ್ತುತೇ ॥೭॥

ಶ್ವೇತಾಂಬರಧರೇ ದೇವಿ ನಾನಾಲಂಕಾರಭೂಷಿತೇ
ಜಗತ್‍ಸ್ಥಿತೇ ಜಗನ್ಮಾತರ್ಮಹಾಲಕ್ಷ್ಮಿ ನಮೋಸ್ತುತೇ ॥೮॥

## ಸಜ್ಜಲದ ಚಿಜ್ಯೋತಿ!

### ಇವಳು ಕಾರಣಕನ್ಯೆ !

॥ಶ್ಲೋಕ॥

ಉದಯರಾಗದ ಕೊಡೆ ಹೂವರಳಿ ನಗುವಂತೆ
ಮಡಿಲಿನಲಿ ಪವಡಿಸಿಹ ಹಸುಳ್ ಕಣ್ ತೆರೆದಂತೆ
ಚಂಚು ಸಂಪುಟದೆರೆದು ಕುಕಿಲಿಡುವ ಮರಿಯಂತೆ
ಬನದ ಕಾರಂಜಿಯಲಿ ನೀರನಟಿ ಪುಟಿವಂತೆ
ಮೂಡಿದಳು ಮಹದೇವಿ ಮುಗಿಲೋಳಿಯಲಿ ತೇಲಿ
ಜಗದ ಕತ್ತಲ ಹರಿಸಿ ಚೆಂಬಳಕನೀಯೆ ॥
ಸಜ್ಜಲದ ಗುಡ್ಡದಲಿ ತೇಜೊ ಮೂರ್ತಿಯು ತಾಯಿ
ಶರಣವ್ವೆ ಧಾರಿಣಿಗೆ ಇಳಿದಳತಿ ಮುದದಿ ॥

**ರಾಗ : ತಾಳ**

ಇವಳು ಕಾರಣ ಕನ್ಯೆ ಶಿವಯೋಗ ಸಂಪನ್ನೆ
ಅನವರತ ಬೆಳಗುವಾ ಶಿವಜ್ಯೋತಿ ರನ್ನೆ ॥
ಗುಡದೂರ ಬಸವಾರ್ಯ ಬಸವ ತಾತರ ಕರುಣೆ
ಕಂದಮ್ಮನೀ ತಾಯಿ ಮುಗ್ದೆ ಯಮುನವ್ವೆ !
ಲಿಂಗಮ್ಮನುದರದಲಿ ಭೃಂಗವಾದಳು ತಾಯಿ
ಜಗದ ಉದ್ಧಾರಕ್ಕೆ ಮೂಡಿಪಾದಳು ॥೧॥

ಸೇವೆಯೇ ಶಿವಪೂಜೆ ಸಾಧನೆಯೇ ಜಪತಪವು
ಸರ್ವರುದ್ಧಾರವೇ ಶಿವದರುಶನಾ
ಅಳುವವರ ಕಣ್ಣೀರ ತೊಡೆವುದೇ ಕಾಯಕವು
ಅದುವೆ ಕಾಯಕ ನಿಷ್ಠೆ ಎಂದಳಿವಳು ॥೨॥

ಅವಳ ಮಾತದು ಮೌನ, ಮೌನವೆಲ್ಲವು ಶಿವನು
ನುಡಿಯ ಮಾಣಿಕ ಮುತ್ತು ಕೊಟ್ಟ ವರವು
ನಡೆಯಲ್ಲಿ ಮಡಿಯಾಗಿ ಶಿವಲತೆಯ ಕುಡಿಯಾಗಿ
ಬೆಳೆದಳಗ್ನಿಯ ಹೊಳೆವ ಕುಂಡವಾಗಿ ॥೩॥

## ಸಜ್ಜಲಗುಡ್ಡದ ಶರಣಮ್ಮ

ಸಜ್ಜಲ ಗುಡ್ಡದ ಶರಣಮ್ಮ ನೀವು
ಉಜ್ವಲ ತೇಜವು ಶರಣಮ್ಮ ॥ಪ॥

ಸಜ್ಜನ ಸಾಧು ಸದ್ ಭಕ್ತರ ಹೃದಯದಿ
ಅಚ್ಚಳಿಯದೆ ನಿಂದೆ ಶರಣಮ್ಮ ॥ಅನು.ಪ॥

ಕುರುಬರ ಮನೆಯಲ್ಲಿ ಶರಣಮ್ಮ ನೀನು
ಹೆಸರಿನ ಶಿಶುವಾದ ಯಮನಮ್ಮ !
ಲಿಂಗಮ್ಮ ತಾಯಿಯ ಭಂಗ ಹರಿಸೀದಂಥ
ಜಂಗಮ ಜ್ಯೋತಿಯ ಮಗಳಮ್ಮ ॥೧॥

ಗುಡ್ಡದೂರಿನ ದೊಡ್ಡ ಬಸವಾರ್ಯರ ಶುದ್ಧ
ಗುಡ್ಡರಾದಿರಿ ತಾಯಿ ಶರಣಮ್ಮ
ನಡೆದ ಜಂಗಮ ಜ್ಯೋತಿ ನುಡಿದ ನಿರ್ಮಲ ಕೀರ್ತಿ
ಬಸವ ತಾತರ ತಂಗಿ ಶರಣಮ್ಮ ॥೨॥

ತಿಪ್ಪೆಯು ಹೋಗಿ ಉಪ್ಪರಿಗೆಯು ಆದಂತೆ
ಒಪ್ಪಿತವಾದಿರಿ ಶರಣಮ್ಮ
ಯಮನಮ್ಮ ಹೋಗಿ ಶ್ರೀ ಶರಣಮ್ಮರಾದಿರಿ
ಅದು ಗುರುಕಾರುಣ್ಯವು ಅಹುದಮ್ಮ ॥೩॥

ಅಕ್ಕನಂತೆ ನೀವು ಚೊಕ್ಕ ಚಿನ್ನಾದಿರಿ
ಮುಕ್ತಾಯಿಯರ ಮಡಿಲ ಶಿಶುವಾದಿರಿ
ಅಕ್ಕಮ್ಮ ನೀಲಮ್ಮ ಇವರ ಸಾಲಿಗೆ ಸೇರಿ
ಮುಕ್ಕಣ್ಣನ ಮುಡಿಗೆ ಹೂವಾದಿರಿ ॥೪॥

'ನಾನು' ಎನ್ನುವುದನ್ನು ನರಕವೆಂದೆಂದು

ನಿರ್ಮಾಯಿ ನೀವಾದಿರಿ ಶರಣಮ್ಮ
ಭಕ್ತಿಜ್ಞಾನ ವೀರವೈರಾಗ್ಯ ಸುಗಮ
ಲಿಂಗಾಂಗ ಶಿವಯೋಗಿ ಶರಣಮ್ಮ ॥೫॥

ನಿನ್ನೆಯ ನಿಯಮದಿ ಅಷ್ಟಾವರಣವ
ಇಷ್ಟಲಿಂಗದ ಜೊತೆ ಮಾಡಿದಿರಿ
ದೃಷ್ಟಿಯೋಗದ ಕೂಡ ಶಿವನ ಸಾಧಿಸಿದೀರಿ
ಷಟುಸ್ಥಲ ಸಂಪನ್ನೆ ಶರಣಮ್ಮ ॥೬॥

ಶರಣು ಬಮದೆನು ತಾಯಿ ಶರಣಮ್ಮ
ಕಿರಣ ಪ್ರಾಂಜಲ ತೇಜ ಶರಣಮ್ಮ
ಕರುಣೆ ಕಂಗಳ ತಾಯಿ ಶರಣಮ್ಮ
ಕರುಳಿನ ತಿರುಳು ನೀ ಶರಣಮ್ಮ

ಶರಣು ಬಂದೆನು ತಾಯಿ ಶರಣಮ್ಮ
ಶರಣು ಬಂದೆನು ತಾಯಿ ಶರಣಮ್ಮ

ಓ ಓ ಶರಣಮ್ಮ
ಆ ಹಾ ಶರಣಮ್ಮ
ಓ ಓ ಶರಣಮ್ಮ
ಆ ಹಾ ಶರಣಮ್ಮ

## ಎಲ್ಲೆಲ್ಲು ನಿನ್ನ ಪಾದ !

ಎಲ್ಲೆಲ್ಲು ನಿನ್ನ ಪಾದ ! ಗುರುಬಸವ
ಎಲ್ಲೆಡೆಯು ನಿನ್ನ ಪಾದ !
ಗುಡದೂರ ಗುರುದೇವ ದೊಡಡ ಬಸವಾರ್ಯನೇ
ಎಲ್ಲೆಡೆಯು ನಿನ್ನ ಪಾದ !

ಹೂವರಳಿ ನಗುವಾಗ ಎಲೆ ಚಿಗುರು ನಲಿವಾಗ
ನವಿಲು ಜಾಗರವಾಡಿ ನರ್ತನುಗೈವಾಗ
ಎಲ್ಲೆಲ್ಲು ನಿನ್ ಪಾದ ॥ ಗುರುಬಸವ
ಎಲ್ಲೆಡೆಯು ನಿನ್ನ ಪಾದ ॥

ಹಕ್ಕಿ ರೆಕ್ಕೆಯ ತೆರೆದು ಹಾರುವೆಡೆಯಲ್ಲಿ
ಕೋಗಿಲೆಯು ಕೂಜನವ ಹರಿಸುವೆಡೆಯಲ್ಲಿ
ಚಿಕ್ಕ ಚುಕ್ಕೆಯು ನಕ್ಕು ಪಕಪಕನೆ ನಗುವಾಗ

ಆಕಾಶದೆಡೆಯಲ್ಲಿ ನಿನ್ನ ಪಾದ
ಗುಡದೂರ ಬಸವಜ್ಞ
ನನ್ನ ಪುಣ್ಯದಫಲ
ಎಲ್ಲೆಡೆಯು ನಿನ್ನ ಪಾದ ॥

ಹಂಪೆಯಾ ಸೊಂಪಿನಲಿ ತಂಪಿನಾ ಸೋಗಿಲಲಿ
ಎಲ್ಲೆಲ್ಲು ನಿನ್ನ ಪಾದ । ಬಸವಾರ್ಯ
ಎಲ್ಲೆಡೆಯು ನಿನ್ನ ಪಾದ ॥

ತುಂಬಿದೆದೆ ನದಿಯಲ್ಲಿ ದುಂಬಿ ಬಂಬಲಿನಲ್ಲಿ
ಸುಳಿವ ತೆಂಬೆಲರಲ್ಲಿ ನಿನ್ನ ಪಾದ । ಬಸವರಸ
ಎಲ್ಲೆಲ್ಲು ನಿನ್ನ ಪಾದ ॥

ಋಷ್ಯಮೂಕದ ಮೇಲೆ ಆ ಮತಂಗದ ಮೇಲೆ
ಹೇಮಕೂಟಾದ್ರಿಯಾ ನೆತ್ತಿ ಮೇಲೆ
ಬಂಡೆ ಬಂಡೆಯ ಮೇಲೆ ಕಂಡೆ ಕಾಣುತಲಿಹುದು
ಗುಡದೂರಿನೊಡೆಯದೇ ನಿನ್ನ ಶ್ರೀಪಾದ
ಎಲ್ಲೆಡೆಯು ನಿನ್ನ ಪಾದ ॥

ಹಂಪೆಯರಸನ ಪೆಂಪು ತುಂಬಿದೀ ಎಡೆಯಲ್ಲಿ
ಶ್ರೀ ವಿಋೂಪಾಕ್ಷನಾ ನೆಲೆವೀಡಿನಲ್ಲಿ
ಯಪ್ಪ ಮುತ್ಯಾ ನಿನ್ನನಲ್ಲದನ್ಯವ ಕಾಣೆ
ನೆನೆವ ನೇಹಿಗನಲ್ಲೆ ನಿನ್ನ ಪಾದ । ಬಸವರಸ
ಎಲ್ಲೆಡೆಯು ನಿನ್ನ ಪಾದ ॥

ಕುಂತಲ್ಲಿ ಕುಂತಲ್ಲಿ ನುಡಿವಲ್ಲಿ ನಡೆವಲ್ಲಿ
ಕಂಡೆನಯ್ಯಾ ತಂದೆ ನಿನ್ನ ಪಾದ ।
ಕಂಡು ಕಂಡಾನಂದದಿಂ ಮೈಯ ಮರೆತೆನೊ ತಂದೆ
ಎದೆಯ ಮಂದಾರವೇ ಗುಡದೂರ ಗುರುವೇ
ಎಡೆಬಿಡದೆ ಕರುಣಿಸಿಹೆ ನಿನ್ನ ಪಾದ ।
ಎಡೆಬಿಡದೆ ಕರುಣಿಸಿಹೆ ನಿನ್ನ ಶ್ರೀ ಪಾದ ॥

ಎಲ್ಲೆಲ್ಲು ನಿನ್ನ ಪಾದ ! ಗುರುಬಸವ
ಎಲ್ಲೆಡೆಯು ನಿನ್ನ ಪಾದ !
ಗುಡದೂರ ಗುರುದೇವ ದೊಡಡ ಬಸವಾರ್ಯನೇ
ಎಲ್ಲೆಡೆಯು ನಿನ್ನ ಪಾದ !

ಲಿಂಗ ಜಂಗಮ ಒಂದೆ ಎಂದು
ಜಾತಿ ಭೇದವು ಇಲ್ಲವೆಂದು
ಮನುಕುಲಕೆ ಜಯ ಮಂಗಲೆಂದು
ಹಾಡಿ ಹರಸದಿ ದೇವಿಯು ।

ಹೊಡೆದವರು ಹೊರದವರು ಎಂದು
ಬೈದವರು ಬಂಧುಗಳು ಎಂದು
ಸರ್ವಸಮತಾ ಭಾವದಲ್ಲಿ
ಸಮದರ್ಶಿಯಾಗಿಯೇ ಬೆಳೆದಳು ॥

ಕಾಯಕವೆ ಕೈಲಾಸವೆಂದು
ಸೇವೆಯೇ ಶಿವಪೂಜೆ ಎಂದು
ಯವ್ವಾ ಯಪ್ಪಾ ಎಂದೆ ನುಡಿದು
ನಡೆದ ನಡೆ ಮಡಿ ತೇರದೋ
ಅವ್ವೆಯರು ತಾಯಮ್ಮನವರು
ಸಜ್ಜಲದ ಶರಣಮ್ಮನವರು
ಅವರ ನೆನವುದೆ ಪುಣ್ಯವು

ಅವರ ಭಜಿಪುದೆ ಭಾಗ್ಯವು ॥

## ಆಗಮನ

(ತಂತಿಯ ತನನನ ಹಿನ್ನೆಲೆಯಲ್ಲಿ)
ತಾನ ನಾನನಾ ತನನನನ ತಾನ ನಾನನಾ ತನನನನ
ತಾನ ತನ್ನನಾ ತನನನಾ ತನ್ನ ತಾನನಾ ತನನ ನನ

ಉದ್ಧಾರಕ್ಕಾಗಿಯೇ ಆಗಮನ ।
ಉದ್ದಾರಕಾಗಿಯೇ ಅವತರಣ ॥
ಲೋಕಮಾತೆ ಶರಣಮ್ಮ ತಾಯಿಯರ
ಮಾತು ಮಂಗಳದ ಆಭರಣ ॥

ಆತ್ಮಬಲದ ಮುಂದಾವ ಬಲವು ನಿಲಲಾರದೆಂಬ ಸ್ಫೂರಣ
ತರ್ಕ ಗಿರ್ಕ ಸಂಕಲ್ಪ ಸಿದ್ದಗದು ಸೇರದೆಂಬ ಮನನ
ಯೋಗ ವೃದ್ಧಿ ಶಿವಯೋಗ ಸಿದ್ಧಿಗೇ ಸಿಗದು ಯಾವ ತಾಣ ?
ತೆರೆದ ಪುಸ್ತಕದ ತೆರದಿ ತಾನಿಹುದು ಓದು ಬಾರೊ ಜಾಣ ॥೧॥

ವಾತ್ಸಲ್ಯದರುಣೆ ಕರುಳುಳ್ಳ ಕರುಣೆ ಇತ್ತಾಳು ವರಗಳನ್ನ
ಬೇಡಿ ಬಂದರಿಗೆ ನೀಡಿದಳು ತಾಯಿ ಒಲವರದ ನುಡಿಗಳನ್ನ
ದೇವೇಂದ್ರ ನಿನಗ ದಿಳ್ಯಾಗ ಐತಿ ಅಲಿ ಹೋಗಿ ತಆರೊ ತಮ್ಮ
ಎಂದವಗೆ ಅಂದು ತಂದಾಳು ತಾಯಿ ಆ ಮಗ ಭಾಗ್ಯವನ್ನ ॥೨॥

ಕಂಬಳೀ ಹಾಳ ತಿಮ್ಮನಾಗೌಡ ಮಗಳ ರೋಗಹರಣ
ಕರಡಿ ಕೃಷ್ಣನಾ ಮಡದಿ ಲಕ್ಷ್ಮಿಗೆ ಜೀವದಾನ ಸಂಜೀವನ
ಚಪ್ಪನ್ನ ಮಠದ ಚನ್ನಯ್ಯ ಮತ್ತೆ ಬಸವಂತ ಗೌಡ ವಮನ
ಬಾಗಲದ ಕೋಟೆ ತಪಶೆಟ್ಟಿ ಗಂಡಲಾ ಗಾಣ ನೀಗಿ ತನನ ! ॥೩॥

ನಾಗರಾಳ ನೀನಾಗುವೆಯೊ ನಾಡೊಡೆಯ ಜನದ ಮಂತ್ರಿ,
ಎಂದಾಳು ತಾಯಿ, ಮಾರ್ವಾಡಿಗಿದ್ದ ಕುತ್ತನ್ನು ದೂರಮಾಡಿ
ಬೇಡವೆಂದರೂ ಓಡೋಡಿ ಬಂದ ಆ ಗಜ ಇಂದ್ರ ಗಡದಾ
ಶ್ರೀಗಳವರ ಸಾವನ್ನು ತಾಯಿ ಸೂಚಿಸಿದ್ದರೂನು ಕೂಡ ॥೪॥

ನಂದೆವಾಡಗೆಯ ಜಂಬಣ್ಣಗಿತ್ತು ಸಂತಾನ ಭಾಗ್ಯವನ್ನ
ಬಾಪುಗೌಡನಾ ತಾಪಹರಿಸಿ, ಚಿಗಟೇರಿಗಿತ್ತು ಚಲನ ।
ಮುದ್ದೆಬಿಹಾಳ ಶುದ್ದ ಭಕ್ತ ಮಲಕಪ್ಪ ಬಸವರಾಜ
ಬುದ್ಧಿ ಹೇಳಿ ಸಂವೃದ್ಧಿಗೊಳಿಸಿ ಉದ್ಧಾರಗೈದ ತೇಜ ॥೫॥

ಎನಿತೊ ಎನಿತೊ ಲೆಕ್ಕಕ್ಕೆ ಇರದಷ್ಟು ಸೇವೆ ನೋಡಾ
ತಿಳಿಯದಿಹರು ತಾವಾಡಿಕೊಂಬುವರು ಇದುವೆ ಬರೀ ಪವಾಡ !
ವಾಕ್ ಸಿದ್ಧಿ ವೃದ್ಧಿ ಶಿವಸತ್ಯ ಶುದ್ದಿ ಉದ್ಧಾರಗೈದ ತಾಯಿ
ಜಗದಂಬೆ ಶರಣು ವರದಾಂಬೆ ಶರಣು ಎಲ್ಲರಿಗು ನೀನೆ ಮಾಯಿ ॥೬॥

## ಮೊರೆ !

ನಮ್ಮೆಲ್ಲರನು ಬಿಟ್ಟು ನೀನೆಲ್ಲಿ ಹೋದೇ
ನಮ್ಮನಾಥರಗೈದು ನೀನೆತ್ತ ಹೋದೇ ॥

ಬೆಳಗಿನೊಳಗಣ ಬೆಳಗೆ ಓ ಮಹಾ ಬೆಳಗೇ
ಕರೂಣೆಯೊಲವಿನ ಬೆಳಗೆ ಶರಣವ್ವೆ ಬೆಳಗೇ
ಶತಮಾನ ಸಂಪೂರ್ಣ ಸಾರ್ಥಕವ ಬದುಕೀ
ಶರಣ ಶಕ್ತಿಯೆ ನೀನು ಮತ್ತೆಲ್ಲಿ ಹೋದೆ ॥೧॥

ನೋಡಲ್ಲಿ ಗೋವುಗಳು ಕಣ್ಣಿರ ಸುರಿಸುತಿವೆ
ಮೂಕವಾಗಿದೆ ತಾಯಿ ಇನ್ನ ಮಾಮನೆಯು
ತಬ್ಬಲಿಯು ನಾವಾದೆವೆಮದು ಭಕ್ತಸ್ತೋಮ
ಒಕ್ಕೊರಲ ಮೊರೆಗೊಡುವುದೋಗೊಡಮ್ಮ ॥೨॥

ಓ ಅಮ್ಮ ನಮ್ಮಮ್ಮ ಶರಣಮ್ಮ ಶಿವನಮ್ಮ
ಸಜ್ಜಲದ ನಾಡಿನಾ ಸಿದ್ಧ ಕನ್ಯೆ
ಮುಗ್ಧರೀ ರೋದನವ ಕೇಳಿ ಕಣ್ತೆರೆ ತಾಯೆ
ಶಿವಜಂಪು ಹತ್ತಿರುವ ಲಿಂಗಮುದ್ರೆಯಳೆ ॥೩॥

'ಯಪ್ಪ ಮುತ್ಯಾ ನನ್ನ ಕರ್‍ಯಾಕ ಹತ್ಯಾನ'
ಎಂದು ಉದ್ಗರಿಸಿದಿರಿ ಬರಸಿಡಿಲ ಸಿಡಿಸಿ
'ಅವ್ವೆ ಹೊಂಟಾಳ್ರೆಪ್ಪೋ' ಎಂಬ ರೋದನ ತುಂಬಿ
ಅಳುತಿತ್ತು ಮುಗ್ಧಜನ ಕಣ್ಣಿರ ಹರಿಸಿ ॥೪॥

'ಬಸವಾ ಬಸವಾ' ಎಂಬ ದಿನಮಂತ್ರ ಪಠಿಸುತಲೆ
ಕಡೆಯುನಿರನೆಳೆದಿರಿ ತಾಯಿ ಅಯ್ಯೊ ಅಯ್ಯಯ್ಯೋ
ಶಿವ ಶಿವ ಅಗಲಿಕೆಯ ಬೇಗೆಯನು ಸಹಿಸವೇ
ತಬ್ಬಲಿಯು ಈ ಜಗವು ತಾಯಿ ಶರಣವ್ವೆ ॥೫॥

## ಮಂಗಳಂ ಜಯ ಮಂಗಳಂ !

ಮಂಗಳಂ ಜಯ ಮಂಗಳಂ ಶುಭ ಮಂಗಳಂ ಜಗದಂಬೆಗೆ
ತಿಂಗಳಿ ಬೆಳಕಂತೆ ಬೆಳಗುವ ಶುಭ್ರ ಶಿವಶರಣಾಂಬೆಗೆ ॥

ಗುಡ್ಡದೂರಿ ದೊಡಡ ಬಸವರ ಪ್ರೇಮದಾಲಯ ಜ್ಯೋತಿಗೆ
ಬಸವ ಆತರ ಮುದ್ದುಕುವರಿಗೆ ಸರ್ವಮಂಗಳೆ ಶರಣೆಗೆ ॥೧॥

ಸಜ್ಜಲದ ಜಾಜ್ವಲ್ಯ ಜ್ಯೋತಿಗೆ ಪಜ್ವಳಿಪ ನವ ತಾರೆಗೆ
ವಜ್ರದೊಲು ಹೊಳೆ ಹೊಳೆವ ತೇಜದ ಸಜ್ಜಲಾಂಬೆಗೆ ಶರಣೆಗೆ ॥೨॥

ಜಯ ಜಯತು ಜಯ ಮಂಗಲಾಂಬೆಗೆ ಶರಣೆ ಷಟ್‌ಸ್ಥಲ ಜ್ಞಾನಿಗೆ
ಜಯತು ಜಯ ಸಾಸಲಿನ ಮರುಳಗೆ ಶುಭದ ನೀಡುವ ದೇವಿಗೆ ॥೩॥

## ಪುಷ್ಪಾಂಜಲಿ

## ಶಿವ ಬಸವ ಶಿವಯೋಗಿ

ಕರುನಾಡಿನ ಗಡಿನೆಲದಲಿ ಬೆಳಗಾವಿಯ ಬಯಲಿನಲಿ
ಗಂಡುಮೆಟ್ಟು ಭೂಮಿಯಲ್ಲಿ ಕಡುಗಲಿಗಳ ಹೆಗಲಿನಲಿ
ಕನ್ನಡ ಬಾವುಟವ ನಿಲಿನಿ ಪಟಪಟಿಸಲು ಹಾರಿಸಿದ
ನಾಡು–ನುಡಿಗಳಭಿಮಾನಕೆ ಧ್ವಜಸ್ತಂಭ ತಾನಾದ

ಧೀರ ಯೋಧನೀ ಯೋಗಿ
ಶಿವಬಸವ ಶಿವಯೋಗಿ ॥

ಇದ್ದು ಇಲ್ಲದಂತೆ ಇರುವ ಸಿದ್ಧನ ಸೊನ್ನಲಿಗೆಯಲ್ಲಿ
ಅಣ್ಣನ ಕಲ್ಯಾಣದಲ್ಲಿ ಅಕ್ಕನ ಉಡುತಡಿಯಲಿ
ಅಕ್ಕರೆ ಉಕ್ಕುಕ್ಕಿ ಬರುವ ನಾಗನೂರ ಮಡಿಲಿನಲಿ
ಶರಣರ ಸಿರಿ ಸೋಗಿಲಲ್ಲಿ ಅವರುಸಿರಿನ ಹಸುರಿನಲಿ

ಹೆಸರು ಬರೆವ ರಸಯೋಗಿ
ಶಿವಬಸವ ಶಿವಯೋಗಿ ॥

ಉಜ್ವಲ ಅಧ್ಯಾತ್ಮದಲ್ಲಿ ಪ್ರಜ್ವಲಿಸುವ ಚಿಜ್ಯೋತಿ
ನಿತ್ಯ ಆತ್ಮಾನುರತನು ಸಂಧಾನದ ಸಂಪ್ರತಿ
ಮೌನದಲ್ಲೆ ಮಹತನ್ನು ಸಾಧಿಸುವವ ಯಾರಿವ ?
ಸೇವೆಯ ಶ್ರೀಗಂಧವಾಗಿ ಸವೆದ ಭವ್ಯಮಾನವ !

ಇವಗೆ ತ್ರಿವಿಧ ದಾಸೋಹಿ
ಶಿವಬಸವ ಶಿವಯೋಗಿ ॥

## ನಮ್ಮ ಭಕ್ತಿ ನಮವವು

ಇವನೆ ದೀನ ದಲಿತ ಬಂಧು
ಇವನೆ ಕರುಣೆಯಮಲ ಸಿಂಧು
ಇವನೆ ದಿಟಕು ತಾಯಿ ಕರುಳು
ಇವನೆ ಜೀವ ದ್ರವ್ಯವು

ಇವನೆ ಭಾವ, ಇವನೆ ಭಾಷೆ
ಇವೆನ ಸ್ಫೂರ್ತಿ ಇವನೆ ಪ್ರತಿಭೆ
ಇವನೆ ಛಂದೋಲಯದ ಕಾವ್ಯ
ಇವನೆ ಭಾವ ಗೀತವು

ಸೇವೆಯೇ ಶಿವಪೂಜೆಯೆಂದು
ಸೇವೆಯೇ ಶಿವನೆಂದು ತಿಳಿದು
ಸೇವೆಗಾಗಿ ಮೀಸಲಿಟ್ಟ
ಇವನ ಬಾಳು ಧನ್ಯವು

ಹಸಿದ ಒಡಲಿಗನ್ನವಾಗಿ
ಹಸುಳೆ ತುಟಿಗೆ ಹಾಲೆ ಆಗಿ

ಉಸಿರು ನೀರು ನೆರಳು ಆದ
ಇವನು ಕಲ್ಪವೃಕ್ಷವು

ಕಲ್ಲಿನಲ್ಲಿ ನಾರ ಸಿಗಿದು
ಮಣ್ಣಿನಲ್ಲಿ ಎಣ್ಣೆ ತೆಗೆದು
ಮಾನವತೆಯ ಮೌಲ್ಯವಿತ್ತ
ಕಾಯಕದಾಯೋಗಿಯು

ಪರಮ ಪೂಜ್ಯ ಪ್ರಭುಸ್ವಾಮಿ
ಸಮನಸ ಸಂಪೂಜ್ಯ ಗುರುಗೆ
ಗುರುವೆ ಆಗಿ ಅರಿವನಿತ್ತ
ಈ ಮಹಾ ಪ್ರಸಾದಿಯು

ಇವನೆ ನಾಗನೂರ ಸುಧೆಯು
ಸತ್ಯ ಸದನ ನಿತ್ಯ ನಿಧಿಯು
ಇವನ ಶ್ರೀ ಶಿವಬಸವಯೋಗಿ
ದಾಸೋಹದ ಮೂರ್ತಿಯು

ವಿಶ್ವ ಚರಣ ವಿಶ್ವ ಬಾಹು
ವಿಶ್ವ ಚಕ್ಷು ವಿಶ್ವ ರೂಹು
ವಿಶ್ವವೆ ತಾನಾದ ಗುರುಗೆ
ನನ್ನ ಭಕ್ತಿ ನಮನವು

## ನೀನೊಬ್ಬ ದೇವನನು ಕಂಡೆ

ನೀನೊಬ್ಬ ದೇವನನು ಕಂಡೆ
ಅವನೆ ತಾ ಬಹುರೂಪಿ ಆಗಿರುವನೆಂದ ॥

ವಿದ್ಯಾರ್ಥಿ ರೂಪದಲಿ ಎಂದೆ
ಅವನೆ ತಾ ನಿತ್ಯಾರ್ಥಿ ಆಗಿರುವನಂದೆ ॥

ವಿದ್ಯೆ ಎಂಬುದು ತಪವು
ವಿದ್ಯೆ ಎಂಬುದು ಜಪವು
ವಿದ್ಯೆಯೇ ಅಜ್ಞಾನ ಹರಿವ ಬೆಳಕು
ಅಜ್ಞಾನ ಹರಿದರೇ ಸುಜ್ಞಾನ ಮೆರೆದರೆ
ದಾರಿದ್ರ್ಯ ದೂರಾಗೆ ನಾಂದಿಯದು ಎಂದೆ ॥

ತಾಯ್ನಾಡ ರೂಪದಲಿ ಎಂದೆ
ಅದುವೆ ತಾ ರಾಷ್ಟ್ರ ರೂಪದ ದೇಹ ಎಂದೆ ॥

ಹೆತ್ತಬ್ಬೆ ಬೇರಲ್ಲ, ಹೊಸ ನೆಲ ಬೇರಲ್ಲ
ತೊತ್ತಾಗಿ ದುಡಿಬೇಕು ಚಿತ್ತೊದೊಮ್ಮನದಲ್ಲಿ
ಎತ್ತು ರಾಷ್ಟ್ರಧ್ವಜವ ಬಿತ್ತರಿಸು ಬಾನಗಲ
ರಾಷ್ಟ್ರದುನ್ನತಿಗಾಗಿ ದುಡಿಯೊ ಮಡಿಯೊ
ಅದರ ಸೇವೆಯೆ ಪೂಜೆ, ಪರವಸ್ತುವದು ಎಂದೆ ॥

ಬಸವನಲಿ ಅವನಿರುವನೆಂದೆ
ಅವನೆ ತಾ ನಡುಮುರಿದು ಬಿದ್ದಿರುವನೆಂದೆ ॥

ಮಿಡಿದೆ ನೀ ಕಣ್ಣೀರು ಅವಗಾಗಿ ಪಣತೊಟ್ಟೆ
ಅವನ ಏಳಿಗೆಗಾಗಿ ಬದ್ಧಕಂಕಣನಾದೆ
ಸ್ವರ್ಗದಲಿ ನಂದನದಿ ದೇವೇಂದ್ರನೋಲಗದಿ
ಕಲ್ಪನೆಯ ಲೋಕದಲಿ ಶಿವನಿನಗೆ ಸಿಗಲಿಲ್ಲ
ಕಾಯಕದ ಯೋಗಿಯೆದೆ ಮಂದಿರದಿ ಗುರುತಿಸಿದೆ ॥

ಭಕ್ತಿ ಜ್ಞಾನಕ್ರಿಯೆಗಳೆಂದೆ
ಅವು ಗುಣ ಮುಪ್ಪರಿಯ ಒಪ್ಪಂದವೆಂದೆ ॥

ನಿಷ್ಠೆ ಬಲಿಯಲು ಬೆಕು ಇಷ್ಟಲಿಂಗದಲಿ
ಅಷ್ಟದಾವರಣದಲಿ ಸಂತುಷ್ಟನಿರಬೇಕು
ತ್ರಿವಿಧಕ್ಕೆ ತ್ರಿವಿಧವನು ನಿತ್ಯ ಅರ್ಪಿಸಬೇಕು
ಸತ್ಯಾರ್ಥಿಯಾಗಿ ತಾ ಶಿವನಾಗಬೇಕು
ಅವನೆ ಷಟ್ಸ್ಥಲ ಬ್ರಹ್ಮ ಚಿನ್ಮಯನು ಎಂದೆ ॥

## ಎಚ್ಚರಾ !

ಎಚ್ಚರಾ
ಎಚ್ಚರಾ
ಎಚ್ಚರಾ
ಎಚ್ಚರಾ

ನಿಚ್ಚನಡೆ ನುಡಿಯಲ್ಲಿ ಸನ್ಯಾಸಿ ಎಚ್ಚರ
ಮನದಿಚ್ಛೆ ಸಲಿಸುವೆಡೆ ಅನವರತ ಎಚ್ಚರ
ಅಚ್ಚ ಹಸುರಿನ ಪಚ್ಚೆ ಅಲ್ಲ ಬದುಕೆಚ್ಚರ
ಸ್ವಚ್ಛಗೈಯುತ ಮನವ ಪರಿಕಿಸಲು ಎಚ್ಚರ !

ಹೆಜ್ಜೆ ಇಟ್ಟಡೆಯಲ್ಲಿ ಪಾಚಿಕಟ್ಟದ ಬಂಡೆ
ಕೊಚ್ಚೆ ರಚ್ಚೆ ಹಾದಿ ಬೆಚ್ಚರವು, ಎಚ್ಚರ
ಕೊಚ್ಚಿ ಹೋಗುವೆ ಜೋಕೆ ಮೈಮರೆಯೆ ಎಚ್ಚರ
ಮುಚ್ಚಂಜೆ ಮುಸುಕಿನಲಿ ಸನ್ಯಾಸಿ ಎಚ್ಚರ !

ಕಚ್ಚೆ ಕೈ ಬಾಯಿಗಳು ಇಚ್ಛೆಯೊಳಗಿದ್ದರೆ
ಅಚ್ಯುತನ ಅಪ್ಪ, ಅಜನಪ್ಪ ಆತನೇ
ನಿಶ್ಚಿಂತನಹನೆಂದು ಸಾರಿದನು ಸರ್ವಜ್ಞ
ಅಚ್ಚೊತ್ತಿದಂತಿರಲಿ ಎದೆಯ ಮಿದು ಭಿತ್ತಿಯಲಿ !

ಶೀಲವೆಂಬದು ತಾನು ಆತ್ಮಶ್ರೀ ಸಂಪದವು
ಶೀಲವೇ ಶ್ರೀಶೈಲ, ಕೈಲಾಸ, ಹಿಮಗಿರಿಯು
ಶೀಲ ಸಂಪಾದನೆಯೆ ಶೂನ್ಯ ಸಂಪಾದನೆಯು
ಶೀಲ ಸಂವರ್ಧನೆಗೆ ಸಜ್ಜಾಗು ಸನ್ಯಾಸಿ !

ಇಂತು ಎಚ್ಚರವಿತ್ತು, ಅಂತೆಯೇ ಬಾಳಿದಿರಿ
ನಾಗನೂರಜ್ಜಗಳೆ ನಡೆನುಡಿಯ ಮಡಿಯೆ

ಶರಣು ಶ್ರೀ ಶಿವಬಸವ ಶಿವಯೋಗಿ ಸಿದ್ಧೇಂದ್ರ
ಶರಣು, ಮನುಕುಲವನ್ನು ಉದ್ಧರಿಪ ಯೋಗೀಂದ್ರ !

ಶರಣು,
ಶರಣು,
ಶರಣು ! !

## ದೇವ ಬಂದ ಧರೆಗೆ

ದೇವ ಬಂದ ಧರೆಗೆ – ಶರಣರ
ಕಾವ ಬಂದ ತಿರೆಗೆ !
ಶಿವಲಿಂಗವಾಗಿ ಕರಕೆ
ಶಿವಬಸವ ಬಂದ ಪುರಕೆ ॥

ಬೆಳಗಾವಿ ಬೆಳಕು ಬಂದ
ಬೆಳುವೊಲದ ಬೆಳಸು ಬಂದ
ನಗನೂರ ನಿಧಿಯು ಬಂದ
ಜಗ ಬೆಳಗೊ ಜ್ಯೋತಿ ಬಂದ ॥

ದಾಸೋಹ ಮೂರ್ತಿ ಬಂದ
ಕಾಷಾಯಧಾರಿ ಬಂದ
ಆಸೆಯನು ನಾಶಗೈದ
ಈಶಾನ ದೇವ ಬಂದ ॥

ತನುವನ್ನು ಗುರುವಿಗಿತ್ತ
ಧನ ಜಂಗಮಕ್ಕೆ ಇತ್ತ
ಮನ ಲಿಂಗದಲ್ಲಿ ಇರಿಸಿ
ಮನುಕುಲದ ಸೇವೆಗೈದ ॥

ಇಷ್ಟಲಿಂಗ ಧರಿಸಿ–ಜಗವೆಲ್ಲ
ಕಷ್ಟ ಹರಿಇ
ದಲಿತರಿಗೆ ದೇವನಾಥ
ದೀನರಿಗೆ ತಾಯಿಯಾದ ॥

ವಾತ್ಸಲ್ಯ ಮೂರ್ತಿ ಬಂದ
ಔತ್ಸುಕ್ಯಧಾತ್ರಿ ತಂದ
ಉತ್ಫುಲ್ಲ ವದನ ಬಂದ
ಸತ್ ಶೀಲ ಶರಣ ಬಂದ ॥

ಬೊಮ್ಮವನು ಬಿಲ್ಲ ತಾನು
ಸುಮ್ಮನೆಯೆ ಇರುವನೆಂದ
ಮೌನದಲೆ ಮಹತು ಬೆಳೆದ
ಚಿನ್ಮೌನಿ ಶಿವನು ಬಂದ ॥

ಸತ್ಯಾರ್ಥಿ ಶರಣ ಬಂದ
'ವಿದ್ಯಾರ್ಥಿ' ಲಿಂಗವೆಂದ

ವಿದ್ಯೆಯದು ತಪಸು ಎಂದ
ಆತ್ಮಾರ್ಥಿ ಸಾಧಿಸೆಂದ ॥

ಭಯಭಕ್ತಿ ಭಾವ ತಂದ
ನಯವಿನಯ ಮೂರ್ತಿನಿಂದ
ಶಿವನನ್ನು ನಂಬು ಎಂದ
ಶಿವನಾಗು ಆಗು ಎಂದ ॥

ನಾಡಿನಲಿ ಮೃಢನ ಕಂಡ
ಗುಡಿ ಎತ್ತಿ ಜೈ ಜೈ ಎಂದ
ದುಡಿಬೇಕು ದೇಶಕೆಂದ
ಮಡಿಬೇಕು ಧ್ಯೇಯಕೆಂದ ॥

ಅಸಮಾಕ್ಷನನ್ನು ತಂದ
ವಿಷಮೆಯ ದೂರಯದ
ಶಶಿಧರನ ಶಿಶುವು ಬಂದ
ರಸಯೋಗಿ ತೋಷ ತಂದ ॥

ಆತ್ಮಾನುರತನು ಬಂದ
ಆಧ್ಯಾತ್ಮ ಜ್ಯೋತಿ ಬಂದ
ಐಕ್ಯಾನು ಸಂವಿಧಾನ
ಸಾಕಾರ ರೂಪಿ ಬಂದ ॥

ಏಕಾಂತದಲ್ಲಿ ಪೂಜೆ
ಲೋಕಾಂತದಲ್ಲಿ ಸೇವೆ
ಗೈದಂಥ ಕರ್ಮಯೋಗಿ
ಶಿವಬಸವ ಸ್ವಾಮಿ ಬಂದ ॥

## ನಾಗನೂರು

ನಾಗನೂರು ನಾಗನೂರು ನಾಗನೂರು
ಯೋಗಿವರ್ಯ ಶಿವಬಸವನ ನಾಗನೂರು ॥ಪ॥

ತ್ಯಾಗಜೀವಿ ಪ್ರಭುಸ್ವಾಮಿ ನಾಗನೂರು
ರಾಗ ಹಾಕಿ ಹಾಡುವಂಥ ನಾಗನೂರು ॥ಅನು. ಪ॥

ಸುತ್ತ ಮುತ್ತ ಕಪ್ಪು ನೆಲದ ನಾಗನೂರು
ಕಸ್ತೂರಿ ಕಂಪು ಸೂಸುತಿರುವ ನಾಗನೂರು
ಮುತ್ತು ಬಿತ್ತಿ ಮುತ್ತು ಬೆಳೆದ ನಾಗನೂರು
ನೆತ್ತಿಯಲ್ಲಿ ಹೊತ್ತ ತೆನೆಯ ನಾಗನೂರು ॥

ಎಳ್ಳು ಬೆಲ್ಲ ಬೆಳೆಯುತಿರುವ ನಾಗನೂರು
ಒಳ್ಳೆ ಜನರ ಗುಳೇತಂದ ನಾಗನೂರು
ಕಾಯಕದಾ ಯೋಗಿಗಳಾ ನಾಗನೂರು
ನಾಯಕ ಶಿವ ಶರಣರಿರುವ ನಾಗನೂರು ॥

ಬೆಳುವೊಲದಾ ಶಿವ ಬೆಳೆಸಿನ ನಾಗನೂರು

ಪ್ರಭುಸ್ವಾಮಿ ಗುರುಗಳಿರುವ ನಾಗನೂರು
ಶಿವಬಸವನ ಶುಭೋದಯದ ನಾಗನೂರು
ಬೆಳಗಾವಿಗೆ ಬೆಳಕು ಕೊಟ್ಟ ನಾಗನೂರು ॥

ಏಳು ಬಣ್ಣ ಸೇರಿ ಬಿಳಿಯ ಬಣ್ಣವಾದ ತೆರದಲಿ
ಸ್ವರಗಳೇಳು ಸೇರಿ ಸಂಗೀತವಾದ ರೀತಿಯಲಿ
ಏಳು ನದಿಯ ನೀರು ಸೇರಿ ತೀರ್ಥವಾದ ತೆರದೊಳು
ಮಠಗಳೇಳು ಮೇಳಗೊಂಡು ಬೆಳೆಯುತಿಹುದು ನಾಗನೂರು ॥

ಬೆಳಕಿನೊಳಗೆ ಬೆಳಕು ಸೇರಿ ಮಹಾ ಬೆಳಕು ಆದಂತೆ
ಹಾಲಿನಲ್ಲಿ ಹಾಲು ಸೇರಿ ಅವಿಭಾಗ್ಯವು ಎನಿಸಿದಂತೆ
ಲಿಂಗ ಆ ಅಂಗವೆರಡು ಕೂಡಿ ಶ್ರೀ ಶಿವನೇ ಆದಂತೆ
ಶಿವಾದ್ವೈತ ದ್ಯುತಿಯೆ ಆಗಿ ಮೆರೆವ ನಮ್ಮ ನಾಗನೂರು ॥